SHANKARA SHANTHI SANDESHA RNI Reg. No. : KARKAN/2010/35307
**Sri Sri Swamy Prabhodanandaji**, Sri Shankara Shanthi Sandesha, Shankarananda Ashrama, 10th Cross, Ullala Main Road, Sri Hari Layout, Gnanabharati Post, Bengaluru 560 056. Cell: 94491 58587.

## ಆಶ್ರಮದ ವಾರ್ತೆಗಳು

1. ಆಶ್ರಮದಲ್ಲಿ ಶ್ರೀಗುರು ಪೂರ್ಣಿಮೆ ಕಾರ್ಯಕ್ರಮವು ಶ್ರೀಗುರುದೇವರ ಆಶೀರ್ವಾದದಿಂದ ಭಕ್ತರ ಸಮ್ಮುಖದಲ್ಲಿ ಸಾಂಗ ಮಂಗಳ ಪ್ರದವಾಗಿ ಜರುಗಿತು.

2) 16ನೇ ವರ್ಷದ ಶ್ರೀ ಶಿವಪಂಚಾಕ್ಷರಿ ಜಪಯಜ್ಞ ಮಹೋತ್ಸವವು ಆಶ್ರಮದಲ್ಲಿ ಪರಶಿವನ ಕೃಪೆಯಿಂದ ಯಾವುದೇ ಅಡ್ಡಿ ಆತಂಕಗಳಿಲ್ಲದೇ, ಕರೋನಾ ಭಯವಿಲ್ಲದೇ ನೆರೆದಿದ್ದ ಭಕ್ತರು 3 ದಿವಸ 6.5 ಲಕ್ಷ ಜಪವನ್ನು ಮಂತ್ರ ವಿಧಿ ಪೂರ್ವಕವಾಗಿ ಮಾಡಿ, ಕಾರ್ಯಕ್ರಮದ ಕೊನೆ ದಿವಸ ಪುಣ್ಯದ ಫಲವನ್ನು ದೇವತೆಗಳಿಗೆ, ಪಿತೃಗಳಿಗೆ, ಅಸ್ಪೃಶ್ಯರಿಗೆ ಹಾಗೂ ಲೋಕ ಕಲಾಣಾರ್ಥವಾಗಿ ಅರ್ಪಿಸಲಾಯಿತು.

3) ಶ್ರೀ ಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮವು ನೆರೆದಿದ್ದ ಭಕ್ತರು ಅಷ್ಟೋತ್ತರ, ಭಜನೆ, ಗೀತಾ ಪಾರಾಯಣ ಹಾಗೂ ಮಂಗಳಾರತಿಯೊಂದಿಗೆ ವೈಭವವಾಗಿ ಜರುಗಿತು.

4) ಸೆಪ್ಟೆಂಬರ್ ತಿಂಗಳ ವಿಶೇಷಗಳು: 9 ರಂದು ಸ್ವರ್ಣಗೌರಿ ವ್ರತ
10 ರಂದು ಗಣೇಶ ಚತುರ್ಥಿ.
16ರಂದು ವಿಶ್ವಕರ್ಮ ಜಯಂತಿ.
19ರಂದು ಅನಂತ ಪದ್ಮನಾಭವ್ರತ
21ರಂದು ಮಹಾಲಯ ಪಿತೃಪಕ್ಷಾರಂಭ

5) ಅಕ್ಟೋಬರ್ ತಿಂಗಳ ವಿಶೇಷಗಳು: 2ರಂದು ಗಾಂಧಿ ಜಯಂತಿ.
6ರಂದು ಮಹಾಲಯ ಅಮವಾಸ್ಯೆ.
14ರಂದು ಆಯುಧ ಪೂಜೆ.
15ರಂದು ವಿಜಯದಶಮಿ.
20ರಂದು ವಾಲ್ಮೀಕಿ ಜಯಂತಿ.

6) ಆಶ್ರಮದಲ್ಲಿ ನಿತ್ಯ ಉದಯ ಹಾಗೂ ಸಂಜೆ ಓಂಕಾರೇಶ್ವರನಿಗೆ ಅಷ್ಟೋತ್ತರ ಪೂಜೆ, ಗೀತಾ ಪಾರಾಯಣ ಜರುಗುತ್ತಾ ಇವೆ.

**ಸರ್ವರಿಗೂ ಆದರದ ಸ್ವಾಗತ.**

ಓಂ ಶಾಂತಿಃ ಶಾಂತಿಃ ಶಾಂತಿಃ

Printed, Published and Owned by **Sri Swamy Prabhodananda.**Published by **Sri Swamy Prabhodananda.**, owned by **Sri Swamy Prabhodananda.**, printed at Sri Yanthrodharaka, Printers and Publishers, 10/2, 1st Main, Aswathkatte Road. Rudrappa Garden, Bangalore - 560 026. Mob: 98860 71144 / 94487 95121
Editor **Sri Swamy Prabhodananda.**

ಓಂ
ನಮೋ ಭಗವತೇ ಶಂಕರಾನಂದಾಯ
ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ

# ಶಂಕರ ಶಾಂತಿ ಸಂದೇಶ

ದ್ವೈಮಾಸಿಕ ಆಧ್ಯಾತ್ಮಿಕ ಪತ್ರಿಕೆ

ಸಂಪುಟ 16 ಸಂಚಿಕೆ 2 ಸೆಪ್ಟೆಂಬರ್ – ಅಕ್ಟೋಬರ್ 2021

## ಶ್ರೀ ಕೃಷ್ಣಜನ್ಮಾಷ್ಟಮಿಯ ವಿಶೇಷ ಸಂಚಿಕೆ



**ಶ್ರೀ ಶಂಕರಾನಂದ ಆಶ್ರಮ ಟ್ರಸ್ಟ್ (ರಿ).**

ಶ್ರೀಹರಿ ಬಡಾವಣೆ, ಜ್ಞಾನಜ್ಯೋತಿನಗರ
ಜ್ಞಾನಭಾರತಿ ಅಂಚೆ, ಬೆಂಗಳೂರು – 560 056

ಓಂ ನಮೋ ಭಗವತೇ ಶಂಕರಾನಂದಾಯ

# ನಿ ವೇ ದ ನೆ

**– ಶ್ರೀಮತಿ ಗೀತಾಶಂಕರ್, ಬೆಂಗಳೂರು**

**"ದೃಷ್ಟಾಂತೋ ನೈವ ದ್ರಷ್ಟಃ ತ್ರಿಭುವನ ಜಠರೇ ಸದ್ಗುರು ಜ್ಞಾನಧಾತ ॥"**

ಜ್ಞಾನವನ್ನು ದಯಪಾಲಿಸುವ ಸದ್ಗುರುವಿಗೆ ಸರಿಯಾದ ದೃಷ್ಟಾಂತ ಕೊಡಲು ಮೂರು ಲೋಕದಲ್ಲಿ ದೃಷ್ಟಾಂತವೇ ಇಲ್ಲವೆಂಬುದು ಭಾರತೀಯ ತತ್ತ್ವಜ್ಞಾನ ಒಂದು ಬೋಧೆ.

ಆತ್ಮೀಯರೇ! ಈ ನಮ್ಮ ನಿವೇದನೆಯು ಶ್ರೀಗುರುವಿಗೆ ಸಂಬಂಧವಾದ ಒಂದು ಬೋಧೆ. ಇದನ್ನು ಭಗವದ್ಗೀತಾ 4ನೇ ಅಧ್ಯಾಯದ 37ನೇ ಶ್ಲೋಕದಲ್ಲಿ ಶ್ರೀಗುರುವಿನ ಮಹಾತ್ಮೆಯನ್ನು ನಾವು ನೋಡಬಹುದು.

**ಯಥೈಧಾಂಸಿ ಸಮಿದ್ಧೋಽಗ್ನಿ ಭಸ್ಮಸಾತ್ ಕುರುತೇಽರ್ಜುನ ।**
**ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇ ತಥಾ ॥ 37 ॥**

ಅರ್ಜುನಾ! ಯಾವ ರೀತಿಯಲ್ಲಿ ಪ್ರಜ್ವಲಿಸುವ ಅಗ್ನಿಯು ಕಟ್ಟಿಗೆಗಳನ್ನು ಸುಟ್ಟು ಭಸ್ಮ ಮಾಡುತ್ತದೆಯೋ ಹಾಗೆಯೇ ಶ್ರೀಗುರುವಿನಿಂದ ಪ್ರಾಪ್ತವಾದ ಜ್ಞಾನವೆಂಬ ಅಗ್ನಿಯು ಮಾನವನ ಹುಟ್ಟು ಸಾವಿಗೆ ಕಾರಣವಾದ ಸರ್ವಕರ್ಮಗಳನ್ನೂ ಭಸ್ಮವನ್ನಾಗಿ ಮಾಡುತ್ತದೆ.

ಈ ಶ್ಲೋಕವು ಮಾನವನ ಉದ್ಧಾರಕ್ಕಾಗಿ ಭಗವಂತನು ಹೇಳಿದ್ದಾನೆ. ಇದು ಜ್ಞಾನದ ಹಾಗೂ ಜ್ಞಾನಿಯ ಮಹತ್ವವನ್ನು ಹೇಳುತ್ತದೆ.

ಹಾಗಾದರೆ ಜ್ಞಾನ ಎಂದರೇನು? ಜ್ಞಾನವೆಂದರೆ ವಿಷಯ ಜ್ಞಾನ ಮತ್ತು ಆತ್ಮಜ್ಞಾನ. ಸರ್ವಪ್ರಪಂಚದ ಸರ್ವ ವಿಷಯಗಳನ್ನು ತಿಳಿಸುವುದು ಜ್ಞಾನವೇ. ಇದೇ ಬಹಿರ್ಮುಖ ವೃತ್ತಿ. ತನಗಿಂತ ಭಿನ್ನವಾಗಿರುವ ಸರ್ವ ಪ್ರಪಂಚದ ಸರ್ವವಸ್ತುಗಳ ಸಂಬಂಧವಾದ ತಿಳುವಳಿಕೆ. ಇದನ್ನು ಎಲ್ಲರೂ ಅನುಭವಿಸುತ್ತಾರೆ. ಸಾಮಾನ್ಯ ಮಾನವರಿಗಿಂತಲೂ ಹೆಚ್ಚಾಗಿ ವಿಜ್ಞಾನಿಗಳು ಆಳವಾಗಿ ಇಳಿದು ಭೂಮಿ, ಸೂರ್ಯ, ಚಂದ್ರ, ನಕ್ಷತ್ರ, ನೀರು, ಗಾಳಿ ಮತ್ತು ನವಗ್ರಹಗಳನ್ನೆಲ್ಲಾ ನಮ್ಮ ವಿಜ್ಞಾನದಿಂದ ತಿಳಿದು ಲೋಕಕ್ಕೆ ಗ್ರಂಥ ರೂಪದಲ್ಲಿ ಧಾರೆ ಎರೆದಿದ್ದಾರೆ. ಇವರೇ ಭೂಗೋಳ–ಖಗೋಳಾದಿ ಶಾಸ್ತ್ರಜ್ಞರು. ಇವರು ತಮಗಿಂತ ಭಿನ್ನವಾಗಿರುವ ಈ ಸರ್ವ ಜಗತ್ತಿನ ಸರ್ವ ವಿಷಯಗಳನ್ನು ತಿಳಿಸುತ್ತಾರೆ. ತಿಳಿಸುತ್ತಲೇ ಇದ್ದಾರೆ. ಇದು ಬಹಿರ್ಮುಖ ವೃತ್ತಿ ಇದನ್ನೇ ವಿಷಯ ಜ್ಞಾನವೆಂದು ಕರೆಯುತ್ತಾರೆ.

ಆದರೆ ಇನ್ನೊಂದು ಜ್ಞಾನವಿದೆ. ಅದು ಅಂತರ್ಮುಖವಾಗಿ ನಮ್ಮ ಒಳಗೆ ಹೋಗುವುದು. ಇದನ್ನು ಆತ್ಮಜ್ಞಾನವೆನ್ನುತ್ತಾರೆ. ಇಂತಹ ಆತ್ಮಜ್ಞಾನವನ್ನು

---

**"ಜ್ಞಾನಾಗ್ನಿ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ"**
ಜ್ಞಾನವೆಂಬ ಅಗ್ನಿಯು ಸರ್ವಕರ್ಮಗಳನ್ನು ಸುಟ್ಟು ಬೂದಿ ಮಾಡುತ್ತದೆ (ಗೀ–4–22)



ಆತ್ಮಜ್ಞಾನಿಗಳಿಂದಲೇ ತಿಳಿಯಬೇಕು. ಇದು ಒಳಗೆ ಹೋಗಿ ಹುಡುಕುವ ಜ್ಞಾನ. ಇದು ನಮ್ಮನ್ನು ನಮ್ಮಿಂದ ನಮ್ಮಲ್ಲಿಯೇ ಹುಡುಕುವ ಜ್ಞಾನ. ಇದನ್ನು ಆತ್ಮಜ್ಞಾನವೆಂದೂ, ಬ್ರಹ್ಮಜ್ಞಾನವೆಂದೂ, ಅಧ್ಯಾತ್ಮವೆಂದೂ ಕರೆಯುತ್ತಾರೆ. ಇಂತಹ ಅಧ್ಯಾತ್ಮ ಜ್ಞಾನವನ್ನು ನಮ್ಮ ಭಾರತ ದೇಶವು ಗುರು ರೂಪದಿಂದ ಸರ್ವತ್ರ ಪ್ರಪಂಚಕ್ಕೂ ಧಾರೆ ಎರೆಯುತ್ತಲಿದೆ. ಭೌತಿಕವಾಗಿ ಬಹಿರ್ಮುಖವಾಗಿ ಹುಡುಕುವುದು ಭೌಗೋಳ ಶಾಸ್ತ್ರವಾದರೆ, ಅಂತರ್ಮುಖವಾಗಿ ಅಂತರಾತ್ಮವನ್ನು ಹುಡುಕುವುದು ಅಧ್ಯಾತ್ಮ ಶಾಸ್ತ್ರ.

ಇಲ್ಲಿ ಅಧ್ಯಾತ್ಮ ಶಾಸ್ತ್ರ ಎಂದರೇನು? ಎಂಬುದನ್ನು ಸ್ವಲ್ಪ ತಿಳಿದು ನೋಡೋಣ –

ಅಧಿ + ಆತ್ಮ = ಅಧ್ಯಾತ್ಮ. ಯಕಾರ ಆದೇಶಸಂಧಿ, ಹಾಗಾದರೆ 'ಅಧಿ' ಎಂದರೇನು? 'ಅಧಿ' ಎಂಬ ಪದಕ್ಕೆ ನಾಲ್ಕು ಅರ್ಥಗಳು. 1) ಪ್ರಾಖ್, 2) ಉಪರಿ, 3) ಅತಿಶಯಂ, 4) ಆಧಿಕ್ಯಂ.

**1) ಪ್ರಾಖ್** : ಪ್ರಾಖ್ ಎಂದರೇನು? ಹಿಂದೆ ಎಲ್ಲಾ ಕಾಲದಲ್ಲಿ ಇರುವುದು. ಅದು ಕಾಲಾತೀತ. ಇದನ್ನು ವಿದ್ಯಾರಣ್ಯ ಮಹಾಸ್ವಾಮಿಗಳು ಪಂಚದಶಿಯಲ್ಲಿ

**ಮಾಸಾಬ್ದ ಯುಗ ಕಲ್ಪೇಷುಗತಾಗಮ್ಯೇಷ್ವನೇ ಕಧಾ ।**
**ನೋದೇತಿ ನಾಸ್ತ ಮೇತಿ ಸಂವಿದೇಕಸ್ವಯಂ ಪ್ರಭಾ ॥**

ಅದು ಹಿಂದಿನ ಮುಂದಿನ ತಿಂಗಳುಗಳಲ್ಲಿಯೂ ಇರುತ್ತದೆ. ಹಿಂದಿನ ಮುಂದಿನ ಯುಗದಲ್ಲಿಯೂ, ಹಿಂದಿನ ಮುಂದಿನ ಕಲ್ಪದಲ್ಲಿಯೂ ಇರುತ್ತದೆ. ಮತ್ತು ಅದು ಎಂದೂ ಹುಟ್ಟಿಲ್ಲ, ಎಂದೂ ಅಸ್ತವಾಗಿಲ್ಲ ಎಂದರೆ ಸತ್ತು ಹೋಗಿಲ್ಲ. ಅದೇ ಎಲ್ಲವನ್ನು ಬೆಳಗುವ ಒಂದೇ ಒಂದಾದ ಸಂವಿತ್, ಅದು ಏಕ– ಅದೇ ನೀನು. ನೀನು ದೇಹವಲ್ಲ – ನೀನು ಹುಟ್ಟುವವನಲ್ಲ–ಸಾಯುವವನಲ್ಲ. ಹುಟ್ಟುವುದು ಈ ಜಡವಾದ ದೇಹ. ಇದು ಒಂದಾವಸ್ಥೆಯಲ್ಲಿ ಅಂದರೆ ಜಾಗ್ರತ್ತಿನಲ್ಲಿರುತ್ತದೆ. ಸ್ವಪ್ನ ಸುಷುಪ್ತಿಯಲ್ಲಿರುವುದಿಲ್ಲ. ನೀನು 'ಸಂವಿತ್' ಎಲ್ಲವನ್ನು ಬೆಳಗುವವನು ಎಂದು ಹೇಳಿದ್ದಾರೆ.

ಗೀತೆಯು – **"ಜ್ಯೋತಿಷಾಮಪಿತಜ್ಯೋತಿತಮಸಃ ಪರಮುಚ್ಯತೇ ।**
**ಜ್ಞಾನಂ ಜ್ಞೇಯಂ ಜ್ಞಾನಗಮ್ಯಂ ಹೃದಿಸರ್ವಸ್ಯವಿಷ್ಠಿತಮ್ ॥"**

ಅದು ಸೂರ್ಯ, ಚಂದ್ರ, ಅಗ್ನಿ–ನಕ್ಷತ್ರ, ವಿದ್ಯುತ್‌ನ್ನು ಬಹಿಃ ಜಗತ್ತಿನಲ್ಲಿ ಬೆಳಗಿಸಿ ದೇಹದ ಒಳಗೆ ನೇತ್ರ, ವಾಣಿ, ಬುದ್ಧಿ ಮತ್ತು ಮನಸ್ಸನ್ನು ಬೆಳಗಿಸುವ ಜ್ಞಾನ, ಜ್ಞೇಯ, ಸ್ವರೂಪವಾಗಿದ್ದು ಸರ್ವರ ಹೃದಯದಲ್ಲಿಯೂ ಇರುತ್ತದೆ ಎಂದು ಗೀತಾ 13–17ರಲ್ಲಿ ಭಗವಂತನು ಹೇಳಿದ್ದಾನೆ. ಇದೇ **'ಪ್ರಾಖ್'** ಎಂದರೆ ಹಿಂದೆ ಎಲ್ಲಾ ಕಾಲದಲ್ಲಿಯೂ ಇರುತ್ತದೆ.

**2) ಉಪರಿ** : ಮುಂದೆ ಎಲ್ಲಾ ಕಾಲದಲ್ಲಿಯೂ ಇದ್ದು ಸೂರ್ಯ ಚಂದ್ರಾದಿಗಳನ್ನು ಬೆಳಗಿಸಿ, ದೇಹದಲ್ಲಿ ನೇತ್ರಾದಿಗಳನ್ನು ಬೆಳಗಿಸುತ್ತದೆ – ಇದಕ್ಕೆ ಲೋಪವೇ ಇಲ್ಲ.

---

**"ಈಶಾವಾಸ್ಯ ಮಿದಂ ಸರ್ವಂ"**
ಸರ್ವ ಜಗತ್ತು ಈಶ್ವರನೇ (ಈಶಾ.ಉ.)

**3) ಅತಿಶಯಂ :** ಇದಕ್ಕೆ ಸರಿಸಮಾನವಾದುದು ಯಾವುದೂ ಇಲ್ಲ. ಇದೇ ಅತ್ಯಂತ ಶ್ರೇಷ್ಠತಮವಾದುದು.

**4) ಅಧಿಕ್ಯಂ :** ಎಲ್ಲೆಲ್ಲಿಯೂ ವ್ಯಾಪಕವಾಗಿರುವುದು, **"ಅಂತರ್ಬಹಿಶ್ಚತತ್ಸರ್ವಂ ವ್ಯಾಪ್ಯನಾರಾಯಣಃ ಸ್ಥಿತಃ"** ಒಳಗೆ-ಹೊರಗೆ ಪರಿಪೂರ್ಣವಾಗಿ ತುಂಬಿದೆ.

ಇಲ್ಲಿಯವರೆಗೆ "ಅಧ್ಯಾತ್ಮ" ಪದದಲ್ಲಿರುವ ಅಧಿ ಎಂಬ ಪದ ಅರ್ಥವನ್ನು ಕೇಳಿದೆವು. ಅದರ ಅರ್ಥವೇನೆಂದರೆ ಅದೇ ಆತ್ಮ. ಅದೇ ನೀನು – ಅದೇ ನಾನು ಎಂದು ಹೇಳಿಸಿಕೊಳ್ಳುತ್ತದೆ.

ಆ ನನ್ನ ವಿಷಯವಾಗಿ ತಿಳಿಸುವುದಕ್ಕಾಗಿ ಈ ಗೀತಾ 4-39ನೇ ಶ್ಲೋಕ ಹೊರಟಿದೆ. ಈ ಶ್ಲೋಕವು "ನಾನು ಯಾರು? ನನ್ನ ಸ್ವರೂಪವೇನು? ಜ್ಞಾನಾಗ್ನಿಯ ಸ್ವರೂಪವನ್ನು, ಜ್ಞಾನಾಗ್ನಿಯಿಂದ ಆಗುವ ಪ್ರಯೋಜವನ್ನು ತಿಳಿಸಿಕೊಡುತ್ತದೆ."

ಧಗಧಗನೆ ಉರಿಯುತ್ತಿರುವ ಬೆಂಕಿಯಲ್ಲಿ ಹಸಿ ಕಟ್ಟಿಗೆಗಳು, ಒಣ ಕಟ್ಟಿಗೆಗಳು, ಮುಳ್ಳು ಕಟ್ಟಿಗೆ ಹೀಗೆ ಎಲ್ಲಾ ವಿಧವಾದ ಕಟ್ಟಿಗೆಗಳನ್ನು ಹಾಕಿದರೂ ಅವೆಲ್ಲವನ್ನೂ ಸುಟ್ಟು ಭಸ್ಮ ಮಾಡುತ್ತದೆ. ಬೆಂಕಿಯ ಸ್ವಭಾವ ಎಲ್ಲಾ ಕಟ್ಟಿಗೆಗಳನ್ನು ಸುಡುತ್ತದೆ. ಭಗವದ್ಗೀತೆಯು ನಮಗೆ ತಿಳಿದಿರುವ ಉದಾಹರಣೆ ಮೂಲಕವಾಗಿ ನಮಗೆ ಜ್ಞಾನವನ್ನು ಬೋಧಿಸುತ್ತದೆ.

ಬೆಂಕಿಯು ಎಲ್ಲಾ ಕಟ್ಟಿಗೆಗಳನ್ನು ಸುಟ್ಟು ಬೂದಿ ಮಾಡುತ್ತದೆ. ಹಾಗೆಯೇ ಜ್ಞಾನ ಎಂಬ ಅಗ್ನಿಯು **"ಸರ್ವಕರ್ಮಾಣಿ"** ಸರ್ವಕರ್ಮಗಳನ್ನು ಸುಟ್ಟು ಭಸ್ಮ ಮಾಡುತ್ತದೆ.

ಸರ್ವಕರ್ಮಗಳು ಯಾವುವು? ಅವು ಹೇಗೆ ಹುಟ್ಟಿವೆ? ಅವು ನಮ್ಮನ್ನು ಹೇಗೆ ಬಂಧಿಸುತ್ತವೆ? ಅದನ್ನು ತಿಳಿಯಬೇಕು.

ಪ್ರತಿಯೊಂದು ಪ್ರಾಣಿಯು ಕರ್ಮ ಮಾಡುತ್ತವೆ. ಅದರಲ್ಲೂ ಮನುಷ್ಯ ಯಾವ ಪ್ರಾಣಿಗಳಿಗೂ ಇಲ್ಲದ ಕೈಗಳನ್ನು ಹೊಂದಿದ್ದಾನೆ. ಈ ಮನುಷ್ಯನು ಕರ್ಮಗಳನ್ನು ಮಾಡಿಯೇ ತೀರಬೇಕು. ಇದನ್ನು ಗೀತೆಯು **"ನಹಿ ಕಶ್ಚಿತ್ ಕ್ಷಣಮಪಿ ಜಾತುತಿಷ್ಠತ್ಯ ಕರ್ಮಕೃತ್"** ಯಾರೂ ಒಂದು ಕ್ಷಣ ಯಾವ ಕರ್ಮವನ್ನು ಮಾಡದೆ ಇರಲಾರರು. ಏಕೆಂದರೆ ಪ್ರಕೃತಿಯಿಂದ ಉತ್ಪತ್ತಿಯಾದ ಗುಣಗಳಿಂದ ಪರವಶರಾಗಿ ಕರ್ಮಗಳನ್ನು ಮಾಡುತ್ತಲೇ ಇರುತ್ತಾರೆ. ಯಾವ ಕರ್ಮವನ್ನು ಮಾಡಿದರೂ ಫಲ ಒಂದೇ ಬರುತ್ತದೆ. ಅಡಿಗೆ ಮಾಡುವುದು ಕರ್ಮ, ಊಟ ಸಿದ್ಧವಾಗುವುದು ಫಲ. ವ್ಯವಸಾಯಗಾರನು ಹೊಲದಲ್ಲಿ ಬಿತ್ತು, ಕಳೆ ತೆಗೆದು ಬೀಜ ಹಾಕುತ್ತಾನೆ. ಇದು ಕರ್ಮ, ಫಲ ಬರುತ್ತದೆ. ಆ ಫಲವನ್ನು ಭೋಗಿಸುತ್ತಾನೆ. ಕೂಲಿಯವನು ಕೆಲಸ ಮಾಡಿ ಹಣ ಪಡೆಯುತ್ತಾನೆ. ಅದರಿಂದ ಸಾಮಾನು ಕೊಂಡು ಅಡುಗೆ ಮಾಡಿ ಊಟ ಮಾಡುತ್ತಾನೆ.

ಹೀಗೆ ಕರ್ಮ ಮಾಡುವುದು, ಅದರಿಂದ ಫಲ ಬರುವುದು. ಆ ಫಲವನ್ನು ಭೋಗಿಸುವುದು, ಆ ಭೋಗವು ವಾಸನೆ ಬಿಟ್ಟು ಹೋಗುತ್ತದೆ ಎಂದರೆ ಪುನಃ ಕರ್ಮ

**"ದೃಶ್ಯತೇ ತ್ವಗ್ರಯಾ ಬುದ್ಧ್ಯ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ"**
ಸೂಕ್ಷ್ಮ ಬುದ್ಧಿಯುಳ್ಳವರು ಪರಮಾತ್ಮನನ್ನು ಗ್ರಹಿಸಬಹುದು (ಕಠ.ಉ.)



ಮಾಡಲು ಉದ್ಯುಕ್ತವನ್ನಾಗಿ ಮಾಡುತ್ತದೆ. ಇದನ್ನು ಶಾಸ್ತ್ರೀಯ ಭಾಷೆಯಲ್ಲಿ ವಾಸನೆ ಎನ್ನುತ್ತಾರೆ. ಆ ವಾಸನೆಯಿಂದ ಪುನಃ ಜನ್ಮ ಬರುತ್ತದೆ. ಹೀಗೆ ಜನ್ಮ, ಜನ್ಮದಿಂದ ಕರ್ಮ, ಕರ್ಮದಿಂದ ಫಲ, ಫಲದಿಂದ ಭೋಗ, ಭೋಗದಿಂದ ವಾಸನೆ, ವಾಸನೆಯಿಂದ ಪುನಃ ಜನ್ಮ. ಇದು ಕರ್ಮದ ಅಪಸರ್ಪ ಚಕ್ರ.

ಹೀಗಾಗಿ ಮಾನವನು ಕರ್ಮ ಚಕ್ರದಲ್ಲಿ ಬಿದ್ದು, ತನ್ನ ಸ್ವರೂಪವನ್ನು ಮರೆತು ಹುಟ್ಟು ಸಾವುಗಳ ಸುಳಿಗೆ ಸಿಕ್ಕು ಒದ್ದಾಡುತ್ತಾನೆ. ಹಾಗಾದರೆ ಮನುಷ್ಯ ಹುಟ್ಟು ಸಾವಿನ ಭವ ಬಂಧನಕ್ಕೆ -ಸರ್ವದುಃಖಗಳಿಗೆ ಕರ್ಮವೇ ಕಾರಣವೆಂದಾಯಿತು.

**ಪ್ರ.: ಹಾಗಾದರೆ ಈ ಕರ್ಮಗಳಿಂದ ಬಿಡುಗಡೆ ಆಗುವುದು ಹೇಗೆ? ಆ ಬಿಡುಗಡೆಯನ್ನು ಯಾರು ಮಾಡುತ್ತಾರೆ?**

**ಉ :** ಈ ಕರ್ಮಗಳ ಸುಳಿಗಳಿಂದ ಬಿಡುಗಡೆ ಮಾಡುವುದೇ ಅಧ್ಯಾತ್ಮ ವಿದ್ಯೆ. ಹಾಗೆ ಬಿಡುಗಡೆ ಮಾಡುವುದನ್ನು ಮೋಕ್ಷ ಎಂದು ಹೇಳುತ್ತಾರೆ. ಆ ಕರ್ಮಗಳ ಸುಳಿಗಳಿಂದ ಬಿಡುಗಡೆ ಮಾಡುವವರೇ ಗುರುಗಳು. ಅವರು ಆ ಕರ್ಮದ ಸುಳಿಗಳಿಂದ ಶ್ರೀ ಗುರುಗಳ ಮೂಲಕ ಜ್ಞಾನವನ್ನು ಪಡೆದು ಬಿಡುಗಡೆ ಹೊಂದುತ್ತಾನೆ. ಇದೇ ಯುಕ್ತ **"ನಾನ್ಯ ಪಂಥಾಯ ವಿದ್ಯತೇ ಅಯನಾಯ"** ಈ ಮಾರ್ಗ ಬಿಟ್ಟರೆ ಬೇರೆ ಮಾರ್ಗವೇಇಲ್ಲ. ಆಗ ನಾವು ಪಡೆದ ಜ್ಞಾನವು, ನಾವು ಅನುಭವಿಸುತ್ತಿರುವ ಅನುಭವಿಸಬೇಕಾಗಿರುವ ಎಲ್ಲಾ ಕರ್ಮಗಳನ್ನು ಅಗ್ನಿಯು ಸೌದೆಗಳನ್ನು ಸುಟ್ಟು ಬೂದಿ ಮಾಡಿದಂತೆ ಈ ಜ್ಞಾನ ಎಂಬ ಅಗ್ನಿಯು ಎಲ್ಲಾ ಹುಟ್ಟಿಗೆ ಕಾರಣವಾಗಿರುವ – ಹುಟ್ಟಿದ ಮೇಲೆ ದುಃಖ ಕೊಡುವ ಸರ್ವ ಕರ್ಮಗಳನ್ನು ಸುಟ್ಟು ಬೂದಿ ಮಾಡುತ್ತದೆ.

**"ಜ್ಞಾನಾಗ್ನಿ ಸರ್ವಕರ್ಮಾಣಿ ಭಸ್ಮಸಾತ್ ಕುರತೇ"**

ಜ್ಞಾನ ಎಂಬ ಅಗ್ನಿಯು ಸರ್ವಕರ್ಮಗಳನ್ನು ಸುಟ್ಟು ಬೂದಿ ಮಾಡುತ್ತದೆ. ಗುರುಗಳಿಂದ ಪಡೆದ ಜ್ಞಾನಾಗ್ನಿಯು ಮಹಾಶಕ್ತಿ ಉಳ್ಳದ್ದು. **"ನಹಿ ಜ್ಞಾನೇನ ಸದೃಶಂ ಪವಿತ್ರ ಮಿಹವಿದ್ಯತೇ"** ಜ್ಞಾನಕ್ಕೆ ಸರಿಸಮಾನವಾಗಿ ಪವಿತ್ರ ಮಾಡುವ ಯಾವ ವಸ್ತುಗಳೂ ಇಲ್ಲವೇ ಇಲ್ಲ. ಆದ್ದರಿಂದ ಜ್ಞಾನಾಗ್ನಿಯು ಹುಟ್ಟಿಗೆ – ಬೆಳವಣಿಗೆಗೆ ಕಾರಣವಾದ ಸಂಚಿತ, ಪ್ರಾರಬ್ಧ ಆಗಾಮಿಕರ್ಮಗಳನ್ನೆಲ್ಲಾ ಸುಡುತ್ತದೆ.

**ಪ್ರ. : ಪ್ರಾರಬ್ಧ ಕರ್ಮ ಎಂದರೇನು?**

**ಉ.:** ನಾವು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮ ಫಲವನ್ನು ಈ ಜನ್ಮದಲ್ಲಿ ಅನುಭವಿಸುವುದನ್ನೇ ಪ್ರಾರಬ್ಧ ಎಂದು ನಾವು ಸಾಮಾನ್ಯವಾಗಿ ಕರೆಯುತ್ತೇವೆ. ಮತ್ತೊಂದು ಅರ್ಥ – ಪ್ರ + ಆರಬ್ದ = ತೀವ್ರತೆಯಿಂದ ಪ್ರಾರಂಭವಾದುದು. ಅಂದರೆ ನಾವು ಅನುಭವಿಸುವ ಕರ್ಮಗಳು. ಅಂದರೆ ಈ ಜನ್ಮದಲ್ಲಿ ಮಾಡಿದ ಎಲ್ಲಾ ಕರ್ಮಗಳ ಫಲವನ್ನು ಒಂದೇ ಜನ್ಮದಲ್ಲಿ ಮಾಡಿದ ಅನೇಕ ಕರ್ಮ ಫಲಗಳನ್ನು ನೂರಾರು ಜನ್ಮದಲ್ಲಿ

**"ಇಹ ಚೇದ ವೇದೀ ದಥ ಸತ್ಯಮಸ್ತಿ । ನ ಚೇದಿ ಹಾವೇದಿನ್ಮಹತೀ ವಿನಷ್ಟಿಃ"**
ಮಾನವನು ಇದೇ ಜನ್ಮದಲ್ಲಿಯೇ ಮುಕ್ತಿ ಪಡೆಯಬೇಕು, ಇಲ್ಲದೇ ಹೋದರೆ ಮಹತ್ತರ-ವಾದ ನಷ್ಟವು ಸಂಭವಿಸುತ್ತದೆ ಎಂದು ಉಪನಿಷತ್ ನಮ್ಮನ್ನು ಎಚ್ಚರಿಸುತ್ತದೆ (ಕೇನ.ಉ.)

ತೀರಿಸಬೇಕಾಗುವುದು. ಹೀಗಾಗಿ ನಾವು ತೀರಿಸಬೇಕಾದ ಕರ್ಮಗಳು ಸಹಸ್ರಾರು ಜನ್ಮಗಳಲ್ಲಿ ಹಂದಿ, ಕತ್ತೆ, ನರಿ, ನಾಯಿ, ಕ್ರಿಮಿಕೀಟಗಳಾಗಬಹುದು. ಇದೇ ಪ್ರಾರಬ್ಧ ಕರ್ಮದ ವಿಷಯ.

**ಸಂಚಿತ :** ಎಂದರೆ ಅನೇಕ ಜನ್ಮಗಳಲ್ಲಿ ಮಾಡಿದ ಪಾಪಪುಣ್ಯ ಕರ್ಮಗಳ ರಾಶಿಯು ಪರ್ವತದಷ್ಟು ಬಿದ್ದಿರುತ್ತದೆ.

ಆಗಾಮಿ ಕರ್ಮವೆಂದರೆ ಒಂದಾದ ಮೇಲೆ ಒಂದು ಬಂದು ತಯಾರಾಗುವುದು. ಸುಖವಾಗಿ ಊಟ ಮಾಡಿ ಸಾಯಂಕಾಲ ವಾಕಿಂಗ್ ಮಾಡುತ್ತಾನೆ. ಇವನ ಮೇಲೆ ಕಾರು ಹರಿದು ತೊಡೆ ಮುರಿಯಿತು. ಇವೆಲ್ಲಾ ಆಗಾಮಿ ಕರ್ಮಗಳು.

ಹೀಗೆ ಜನ್ಮಜನ್ಮಾಂತರದಲ್ಲಿ ಮಾಡಿದ ಕರ್ಮಗಳು ಒಂದಾದ ಮೇಲೆ ಒಂದರಂತೆ ಕೆಟ್ಟದ್ದು–ಒಳ್ಳೆಯದು ಬರುತ್ತಲೇ ಇರುತ್ತವೆ. ಇದೇ ಕರ್ಮಗಳ ಮೀಮಾಂಸೆ. ಇವುಗಳಿಂದ ಬಿಡಿಸಿಕೊಳ್ಳುವಂತೆ ಮಾಡುವುದೇ ಜ್ಞಾನ. ಆದ್ದರಿಂದ **"ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹವಿದ್ಯತೇ"** ಎಂದು ಭಗವದ್ಗೀತೆಯು ಜ್ಞಾನಕ್ಕೆ ಸರಿಸಮಾನವಾಗಿ ನಮ್ಮನ್ನು ಪ್ರವಿತ್ರ ಮಾಡುವುದು ಯಾವುದೂ ಇಲ್ಲ ಎಂದು ಹೇಳಿದೆ.

**ಪ್ರ. : ಜ್ಞಾನ ಎಂದರೇನು? ಅದು ಎಲ್ಲಿ ದೊರೆಯುತ್ತದೆ?**

**ಉ.:** ನಾನು ಈ ದೇಹವಲ್ಲ. ಇಂದ್ರಿಯಗಳಲ್ಲ, ಮನಸ್ಸು, ಬುದ್ಧಿ, ಪ್ರಾಣ ಯಾವುದೂ ನಾನಲ್ಲ. ನಾನು ಈ ದೇಹವನ್ನು ನಡೆಸುವ ಯಜಮಾನನೇ ನಾನು ಎಂಬ ಉತ್ತಮ ತಿಳುವಳಿಕೆಯೇ ಜ್ಞಾನ.

**ಪ್ರ. : ಈ ಜ್ಞಾನವು ನಾವು ಜನ್ಮಜನ್ಮಾಂತರದಲ್ಲಿ ಗಳಿಸಿದ ಪಾಪಪುಣ್ಯದ ರಾಶಿಯನ್ನು ನಿವಾರಣೆ ಮಾಡುತ್ತದೆಯೆ?**

**ಉ. :** ರತ್ನಾಕರ ಬೇಡನು ಸಹಸ್ರಾರು ಜನಗಳನ್ನು ಕೊಂದು ಹಾಕಿದ್ದ. ಅಂತಹವನು ನಾರದರ ಉಪದೇಶದಿಂದ ಪವಿತ್ರನಾದ. ಅದನ್ನು ಗೀತೆಯು **"ಅಪಿ ಚೇದಸಿ ಪಾಪೇಭ್ಯಃಸರ್ವೇಭ್ಯಃ ಪಾಪಕೃತ್ತಮ್ । ಸರ್ವ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ ॥"**

ಯಾವನು ಅತ್ಯಧಿಕವಾದ ಪಾಪವನ್ನು ಮಾಡಿದ್ದರೂ ಜ್ಞಾನವೆಂಬ ದೋಣಿಯ ಮೂಲಕ ಸಮಸ್ತ ಪಾಪಗಳನ್ನು ಸರಿಯಾಗಿ ದಾಟಿ ಹೋಗುತ್ತಾನೆ. ಇದೇ ಜ್ಞಾನದ ಹೆಚ್ಚುಗಾರಿಕೆ. ಇದು ಇಲ್ಲಿಯವರೆಗೆ ಮಾಡಿದ ಸರ್ವಪಾಪಗಳನ್ನು ಸುಟ್ಟು ಹಾಕುತ್ತದೆ.

**ಪ್ರ.: ಜ್ಞಾನಾಗ್ನಿಯು ಸರ್ವಕರ್ಮಗಳನ್ನು ಭಸ್ಮ ಮಾಡುತ್ತದೆ ಎಂದರೆ ಅರ್ಥವೇನು?**

**ಉ.:** ಈ ಮೇಲೆ ಹೇಳಿದ ಪ್ರಾರಬ್ಧ– ಸಂಚಿತ ಆಗಾಮಿ ಸರ್ವಕರ್ಮಗಳನ್ನು ಸುಟ್ಟು ಬೂದಿ ಮಾಡುತ್ತದೆ.

**ಸಂದೇಹ :** ಒಬ್ಬನಿಗೆ ಮೂರು ಜನ ಪತ್ನಿಯರು. ಅವರು ಸತ್ತರೆ ಮೂರು ಜನ

**"ನಾ ಹಂ ಕರ್ತಾ ಹರಿಃ ಕರ್ತಾ ತತ್ಪೂಜಾಕರ್ಮ ಚಾಖಿಲಮ್"**
ಯಾವ ಕೆಲಸಕ್ಕೂ ನಾನು ಕರ್ತನಲ್ಲ, ಭಗವಂತನೇ ಕರ್ತ
ನಾನು ಮಾಡುವುದೆಲ್ಲಾ ಅವನ ಪೂಜೆ. (ಮಧ್ವಾಚಾರ್ಯ)



ವಿಧವೆಯರಾಗುತ್ತಾರಲ್ಲವೆ? ಹೌದು, ಆದರೆ ಒಬ್ಬಳು ಪತಿ ಸತ್ತಾಗ ಗರ್ಭಿಣಿ ಅವಳು ಹಿಂದಿನಂತೆ ಬಳೆ, ಕುಂಕುಮ ಇತರ ಮಂಗಳ ದ್ರವ್ಯವನ್ನು ಪತಿಯು ಸತ್ತರೂ ಧರಿಸಿರುತ್ತಾಳೆ ಆಗ ಆಕೆ ಮುತ್ತೈದೆಯಲ್ಲವೇ?

**ಉ.:** ಬೇರೆಯವರ ದೃಷ್ಟಿಯಲ್ಲಿ ಮುತ್ತೈದೆ ಸ್ವ ದೃಷ್ಟಿಯಲ್ಲಿ ವಿಧವೆಯೆ ಮತ್ತು ಮೂರು ಜನರೂ ವಿಧವೆಯರೇ, ಹಾಗೆ ಬ್ರಹ್ಮಜ್ಞಾನಿಯಾದ ಮೇಲೆ ಪ್ರಾರಬ್ಧ, ಸಂಚಿತ, ಆಗಾಮಿ ಯಾವ ಕರ್ಮಗಳೂ ಬಾಧಿಸಲಾರವು.

**ಪ್ರ.: ಆ ಮೂರು ಕರ್ಮಗಳ ಪಾಪ ಪುಣ್ಯ ತೀರಿಸಲು ಈ ಜನ್ಮದಲ್ಲಿ ಹುಟ್ಟಿ ಬಂದಿರುತ್ತಾನೆ. ಆ ಮೂರು ಕರ್ಮಗಳು ಜ್ಞಾನದಿಂದ ಭಸ್ಮವಾದ ಮೇಲೆ ಕೂಡಲೇ ದೇಹ ಬಿದ್ದು ಹೋಗಬೇಕಲ್ಲವೇ?**

**ಉ.:** ಹಾಗೆ ಜ್ಞಾನದಿಂದ ಮೂರು ಕರ್ಮಗಳು ಸುಟ್ಟು ಹೋದರೆ ಆ ಜ್ಞಾನಿಯು ಜೀವನ್ಮುಕ್ತನಾದರೆ ಭಕ್ತರಿಗೆ ಬೋಧಿಸುವವರಾರು?

ಆಗ ಅವನು ಹಿಂದೆ ಮಾಡಿದ ಪ್ರಾರಬ್ಧದಿಂದ ಬದುಕಿರುವುದಿಲ್ಲ. ಅವನಿಗೆ ಯಾವ ಕರ್ಮಗಳೂ ಇರುವುದಿಲ್ಲ. ಆದರೂ 9ನೇ ಅಧ್ಯಾಯದ 13ನೇ ಶ್ಲೋಕವು ಆ ಮಹಾತ್ಮನ ಇರುವಿಕೆಗೆ ಭಕ್ತರಿಗೆ ಜ್ಞಾನ ಬೋಧೆ ಮಾಡಲು ಒಂದು ಉತ್ತಮವಾದ ಆಶ್ವಾಸನೆ ಹೇಳಿದೆ.

**ಪ್ರ.: ಆ ಆಶ್ವಾಸನೆ ಯಾವುದು?**

**ಉ.: "ಮಹಾತ್ಮಾನಸ್ತು ಮಾಂ ಪಾರ್ಥದೈವೀಂ ಪ್ರಕೃತಿ ಮಾಶ್ರಿತಾಃ"** ಅಂದರೆ ಆ ಮೂರು ಕರ್ಮಗಳನ್ನು ನಿವಾರಣೆ ಮಾಡಿಕೊಂಡ ಆ ಪುರುಷನಿಗೆ ದೇಹ ಧಾರಿಯಾಗಿದ್ದು ಮತ್ತೊಬ್ಬರಿಗೆ ಜ್ಞಾನ ಬೋಧಿಸಲು "ದೈವೀ ಪ್ರಕೃತಿಯೇ ಆಶ್ರಯವಾಗಿರುತ್ತದೆ. ಆಗ ಅವನ ದೇಹ ಮಾಂಸಮಯವಾದ ದೇಹವಾಗಿರುವುದಿಲ್ಲ. ದೇಹವೆಲ್ಲವೂ ಪರಮಾತ್ಮಾಕಾರವೇ ಆಗಿರುತ್ತದೆ. ಆದ್ದರಿಂದ ಆ ಮಹಾತ್ಮನ ಪಾದಪೂಜೆ ಮಾಡುವುದು. ಅವನು ನೋಡುವವರ ಕಣ್ಣಿಗೆ ಮನುಷ್ಯಾಕಾರವಾಗಿ ಕಂಡರೂ ಅವನು ಚಿನ್ಮಯಿ ರೂಪನೇ. ಅವನು ಆಗ ಕರ್ಮ ಮಾಡುವುದಿಲ್ಲವೇ? ಅಂದರೆ ಅವು ಕರ್ಮವಲ್ಲದ ಕರ್ಮಾಭಾಸ. ಅವು ಬಂಧವನ್ನುಂಟು ಮಾಡುವುದಿಲ್ಲ.

**ಉದಾ.:** ಶ್ರೀಕೃಷ್ಣನು ಅನೇಕ ರಾಕ್ಷಸರನ್ನು ಸಂಹಾರ ಮಾಡಿದ. ಪೂತನಿಯನ್ನು ಕೊಂದ – ಕಂಸ – ಚಾಣೂರ – ಅನೇಕ ಜನ ಕೊಂದ, ಭಾರತ ಯುದ್ಧದಲ್ಲಿ ಸಹಸ್ರಾರು ಜನರನ್ನು ಕೊಲ್ಲಿಸಿದ. ಆದರೆ ಅವನಿಗೆ ಯಾವ ಕರ್ಮಭಾಸವೂ, ಪಾಪವೂ ಇಲ್ಲ. ಅವನು ಮಾಡುವುದೆಲ್ಲಾ ಬಂಧಮುಕ್ತಿ ಕರ್ಮ.

**ಉದಾ.:** ರಾತ್ರಿ ಸ್ವಪ್ನದಲ್ಲಿ ನೀವೇ ಯಾರನ್ನಾದರೂ ಕೊಂದು ಹಾಕಿರುತ್ತೀರಿ. ಅದು ಪಾಪವೆ? ಇಲ್ಲ. ಹಾಗೆ ಶ್ರೀಕೃಷ್ಣ, ಶ್ರೀರಾಮ ಅನೇಕ ಜನ ರಾಕ್ಷಸರನ್ನು ಕೊಂದರೂ ಅವರು

**"ಯನ್ಮನಸಾನುಮನತೆ ಯೇ ನಾರ್ಹು ಮನೋಮತಮ್"**
ಯಾವುದು ಮನಸ್ಸಿನಿಂದ ಮನನ ಮಾಡಲು ಆಗುವುದಿಲ್ಲವೋ, ಯಾವುದು ಮನಸ್ಸಿಗೆ
ಮನನ ಮಾಡುವ ಶಕ್ತಿ ಕೊಟ್ಟಿರುವುದೋ ಅದೆ ಪರಮಾತ್ಮ (ಕೇನ.ಉ.)

ಬ್ರಹ್ಮ ಸ್ವರೂಪರೇ. ಅವರ ಜ್ಞಾನವು ಅಗ್ನಿ ಸ್ವರೂಪವಾಗಿದ್ದು ಸರ್ವಕರ್ಮಗಳನ್ನು ಭಸ್ಮ ಮಾಡುತ್ತದೆ.

ಈ ಶ್ಲೋಕವು ಜ್ಞಾನಿಗಳನ್ನು, ಜ್ಞಾನವನ್ನು, ಜ್ಞಾನವು ಮಾಡುವ ಮಹದುಪಕಾರವನ್ನು ಹೇಳಿ ಸರ್ವರನ್ನು ಉದ್ಧಾರ ಮಾಡಲು ಬಂದಿದೆ.

**ಓಂ ತತ್ಸತ್**

# ಭಕ್ತನ ಲಕ್ಷಣಗಳು

**– ಡಾ॥ ಅನಂದಕುಮಾರ್, ಬೆಂಗಳೂರು**

**1) ಅದ್ವೇಷ್ಟಾ ಸರ್ವಭೂತಾನಾಮ್ –**

ಹಿಂದಿನ ಸಂಚಿಕೆಯಲ್ಲಿ ಹನ್ನೆರಡನೇ ಅಧ್ಯಾಯದ ಗೀತೆಯಲ್ಲಿ ಬರುವ ಭಕ್ತನ 33 ಲಕ್ಷಣಗಳ ಪೀಠಿಕೆ ಬಗ್ಗೆ ತಿಳಿದುಕೊಂಡೆವು. ಈಗ ಒಂದೊಂದೇ ಲಕ್ಷಣಗಳನ್ನು ತಿಳಿಯೋಣ. ಅದರಲ್ಲಿ ಮೊದಲನೆಯ ಲಕ್ಷಣವಾದ **"ಅದ್ವೇಷ್ಟಾ ಸರ್ವಭೂತಾನಾಮ್"** ಅಂದರೆ ಸರ್ವಭೂತಗಳಲ್ಲಿ ದ್ವೇಷವಿಲ್ಲದವನು. ಏಕೆಂದರೆ ದ್ವೇಷವು ಭಕ್ತಿಗೆ ವಿರೋಧವಾದುದು. ಎಲ್ಲಿಯವರೆಗೆ ಹೃದಯದಲ್ಲಿ ದ್ವೇಷಭಾವನೆ ಇರುತ್ತದೆಯೋ ಅಲ್ಲಿಯವರೆಗೆ ಭಗವಂತನ ಸಾಕ್ಷತ್ಕಾರ (ಮೋಕ್ಷ) ಸಾಧ್ಯವೇ ಇಲ್ಲ.

ನೀರಿಗೂ ಬೆಂಕಿಗೂ ಹೊಂದಿಕೆಯಾಗುವುದಿಲ್ಲವೂ, ಅದೇ ರೀತಿ ದ್ವೇಷಕ್ಕೂ ಭಕ್ತಿಗೂ ಹೊಂದಿಕೆಯಾಗುವುದೇ ಇಲ್ಲ. ದ್ವೇಷ ವೃತ್ತಿಯು ಅಂತಃಕರಣದಲ್ಲಿ ಯಾವ ರೂಪದಿಂದಿದ್ದರೂ ಅವರು ಭಕ್ತನಾಗಲಾರನು. **"ಸರ್ವಭೂತಾನಾಂ ಅದ್ವೇಷ್ಟಾ"** ಎಂದು ಭಗವಂತನು ಹೇಳಿದ್ದಾನೆ. ಯಾವ ಮತದವರನ್ನು ದ್ವೇಷಿಸಬೇಡವೆಂದು ಇಸ್ಲಾಂ ಧರ್ಮದ ಮಹಮ್ಮದ್ ಪೈಗಂಬರನು ಸೋದರತ್ವವನ್ನು ಬೋಧಿಸಿದ್ದಾನೆ. ಕ್ರೈಸ್ತನು ಹೇಳಿದ, ಮಾನವರೆಲ್ಲರೂ ಒಂದೇ ತಂದೆಯ ಮಕ್ಕಳು ಅವರನ್ನು ದ್ವೇಷಿಸಬೇಡ. ಶ್ರೀಕೃಷ್ಣ ಭಗವಂತನಾದರೂ "ಸಮಸ್ತ ಭೂತ ಜಾಲವನ್ನು ದ್ವೇಷಿಸಬೇಡ" ಎಂದಿದ್ದಾರೆ. ಭೂತನೆಂದರೆ ಹುಟ್ಟಿದ ಪ್ರತಿ ವಸ್ತುಗಳು ಭೂತಗಳೇ, ಬರೀ ಸಜಾತಿ ಮನುಷ್ಯರಲ್ಲ. ಪಶು–ಪಕ್ಷಿ ಕ್ರಿಮಿ–ಕೀಟ ಚರಾಚರ ಭೂತಗಳಲ್ಲಿ ಎಲ್ಲದರಲ್ಲಿಯೂ ದ್ವೇಷಭಾವನೆ ಇರಬಾರದೆಂದು ಗೀತೆಯ ಸಂದೇಶ. **"ವಾಸುದೇವಸ್ಸರ್ವ ಮಿತಿ"** ಎಲ್ಲವೂ ವಾಸುದೇವನೆಂಬ ಗೀತಾ ವಾಕ್ಯವಿದೆ. ಹೀಗಿರುವಾಗ ಯಾವುದನ್ನು ದ್ವೇಷಿಸಬೇಕು? **"ಆತ್ಮಾ ಪಶ್ಯೇನ ಸವತ್ರ"** ಎಂದು ಗೀತೆ ಹೇಳಿದೆ. ಎಲ್ಲೆಲ್ಲಿಯೂ ಆತ್ಮನೇ ಇದೆ. ಯಾವುದನ್ನು ದ್ವೇಷಿಸಿದರೂ ನಿನ್ನನ್ನು ನೀನು ದ್ವೇಷಿಸಿದಂತೆಯೇ ಆಗುತ್ತದೆ. ನೀನು ಹೃದಯದಲ್ಲಿ ಶತ್ರುವನ್ನು ದ್ವೇಷಿಸುತ್ತಾ ಯಜ್ಞದಲ್ಲಿ **"ಅಗ್ನಿಯೇ ಸ್ವಾಹಾ"** ಎಂದರೆ ಅದು ಅಗ್ನಿದೇವನಿಗೆ ಹೋಗಲ್ಲ. ಆ ಯಜ್ಞದ ಹವಿಸ್ಸು ಶತ್ರುವಿಗೆ ಹೋಗುತ್ತದೆ. ಆದ್ದರಿಂದ

---

**"ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ"**
ಜ್ಞಾನಕ್ಕೆ ಸರಿಸಮಾನವಾದ ಯಾವ ಪವಿತ್ರ ವಸ್ತುಗಳು ಇಲ್ಲವೇ ಇಲ್ಲ.
(ಗೀತೆ 4–38)



ಶತ್ರುವಿಗೆ ಇನ್ನು ಬಲ ಹೆಚ್ಚಾಗುತ್ತದೆ. ಈ ರೀತಿ ದ್ವೇಷ ಧರ್ಮದ ವಿರೋಧಿ. ಇದರಿಂದ ಧರ್ಮದ ಸಿದ್ಧಿ ಹಾಗುವುದಿಲ್ಲ.

ದ್ವಿಷ್ ಪದದಿಂದ ದ್ವೇಷವು ಆಗಿದೆ. ದ್ವಿಷ್ ಎಂದರೆ ದ್ವಿಗುಣ ವಿಷ, ದ್ವೇಷ ಮಾಡುವವವನು ಅಸೂಯೆವಂತನಾಗುತ್ತಾನೆ. ದ್ವೇಷದ ಪೂರ್ಣ ನಿರ್ವತ್ತಿ ಪರಮಾತ್ಮ ಜ್ಞಾನದಿಂದಲೇ ಸಾಧ್ಯ. ಸರ್ವತ್ರ ಭಗವದ್ಭಾವನೆ ಉಂಟಾದರೆ ಎಲ್ಲರಲ್ಲಿರುವ ಆತ್ಮನೇ ನಾನು ಎಂಬ ಭಾವನೆ ಉಂಟಾಗಿ ದ್ವೇಷ ನಿವೃತ್ತಿ ಆಗುತ್ತದೆ.

**ಉದಾ.:** ಸಪ್ತ ಋಷಿಗಳಲ್ಲಿ ವಶಿಷ್ಠರು ಬಹಳ ಶಾಂತ ಗುಣದವರು. ಇವರು ಎಲ್ಲರನ್ನೂ ಪ್ರೇಮ ಮಾಡುತ್ತಿದ್ದರು. ಅದೇ ವಿಶ್ವಾಮಿತ್ರ ಋಷಿ ಬಹಳ ಕೋಪ, ಮಹಾಗರ್ವಿ. ತನ್ನ ತಪಸ್ಸೇ ಶ್ರೇಷ್ಠವೆಂದು ಹೆಮ್ಮೆ ಪಡುತ್ತಿದ್ದ. ಎಲ್ಲಾ ಋಷಿಗಳು ವಶಿಷ್ಠರನ್ನು ಬಹು ಆದರದಿಂದ ಪುರಸ್ಕರಿಸುತ್ತಿದ್ದರು. ಇದನ್ನು ನೋಡಿ ವಿಶ್ವಾಮಿತ್ರನಿಗೆ ವಶಿಷ್ಠರ ಮೇಲೆ ತುಂಬಾ ದ್ವೇಷ ಭಾವನೆ ಬಂದು ಅವರನ್ನು ಏನಾದರೂ ಮಾಡಿ ಕೊಂದು ಹಾಕಬೇಕೆಂದು ನಿಶ್ಚಯಿಸಿದ. ವಶಿಷ್ಠರು ಒಂದು ಸಾರಿ ರಾತ್ರಿ ಊಟವಾದ ಮೇಲೆ ಅವರ ಹೆಂಡತಿ ಆರುಂಧತಿಯ ಜೊತೆಗೆ ಕುಟೀರದ ಹೊರಗೆ ಲೋಕಾಭಿರಾಮವಾಗಿ ಕುಳಿತು ಮಾತನಾಡುತ್ತಿದ್ದಾಗ, ವಿಶ್ವಾಮಿತ್ರನು ಹರಿತವಾದ ಆಯುಧವನ್ನು ಇಟ್ಟುಕೊಂಡು ವಶಿಷ್ಠರನ್ನು ಕೊಂದು ಹಾಕಲು ಅವರು ಕುಳಿತುಕೊಂಡಿದ್ದ ಬಂಡೆಯ ಕೆಳಗೆ ಹೊಂಚು ಹಾಕಿ ಕಾಯುತ್ತಿದ್ದ. ಆಗ ಆರುಂಧತಿಯು ಬೆಳದಿಂಗಳು ಎಷ್ಟು ಪ್ರಖರವಾಗಿದೆ. ವಿಶ್ವಾಮಿತ್ರನ ತಪಸ್ಸಿನಂತೆ ಎಲೆಲ್ಲಿಯೂ ಹರಡಿದೆ ಎಂದಳು. ಆಗ ವಶಿಷ್ಠರು ಹೌದು ವಿಶ್ವಾಮಿತ್ರನ ತಪಸ್ಸು ಬಹು ಪ್ರಖರವಾದುದು ಎಂದರು. ಆಗ ಆರುಂಧತಿಯು ಎಲ್ಲರೂ ವಿಶ್ವಾಮಿತ್ರರನ್ನು ಗೌರವಿಸುವಾಗ ನೀವೇಕೆ ಗೌರವಿಸುತ್ತಿಲ್ಲ? ವಶಿಷ್ಠರು ಶಾಂತ ರೀತಿಯಿಂದ ಹೌದು ವಿಶ್ವಾಮಿತ್ರನು ಅತ್ಯಂತ ತಪಸ್ವಿ. ಅವರಿಗೆ ಮೀರಿದ ತಪಸ್ಸನ್ನು ಯಾರೂ ಮಾಡಲಾರರು. ಋಷಿ ಕುಲದಲ್ಲಿ ಅವರಿಗೆ ಸರಿಸಮಾನರಾದವರು ಯಾರೂ ಇಲ್ಲ. ಆದರೆ ಅವರಿಗೆ ಸ್ವಲ್ಪ ಅಹಂಕಾರವಿದೆ. ನಾನೇ ಶ್ರೇಷ್ಠ ಎಂಬ ಗರ್ವವಿದೆ. ಅದು ಹೋದರೆ ಅವರಿಗೆ ಸರಿಸಮಾನರು ಯಾರೂ ಇಲ್ಲವೆಂದು ಹೊಗಳಿದರು. ಅದನ್ನು ಮರೆಯಿಂದ ಕೇಳಿದ ವಿಶ್ವಾಮಿತ್ರನಿಗೆ ಕಣ್ಣು ತೆರೆಯಿತು. ದ್ವೇಷ ಭಾವನೆ ನಿವೃತ್ತಿಯಾಯಿತು. ಎದ್ದು ಬಂದು ವಶಿಷ್ಠರ ಕಾಲು ಹಿಡಿದ ಆಗ ವಶಿಷ್ಠರು "ಹೇ ಬ್ರಹ್ಮರ್ಷಿಯೇ ಮೇಲೆ ಹೇಳು" ಎಂದರು. ನೋಡಿ ದ್ವೇಷ ಭಾವನೆಯಿಂದ ವಿಶ್ವಾಮಿತ್ರರು ವಶಿಷ್ಠರನ್ನೇ ಕೊಂದು ಹಾಕುವುದಕ್ಕೆ ಹೊರಟಿದ್ದರು. ದ್ವೇಷವು ಮತ್ತೊಬ್ಬರನ್ನು ನಾಶ ಮಾಡಲು ಕಾಯುತ್ತದೆ.

ಹೀಗೆ ದ್ವೇಷದಿಂದಾಗುವ ಅನಾಹುತ ನಷ್ಟ ಅಷ್ಟಿಷ್ಟಲ್ಲ. ದ್ವೇಷದಿಂದ ಹೆಂಡತಿ ಗಂಡನನ್ನು ಕೊಲ್ಲುತ್ತಾಳೆ. ಗಂಡ ಹೆಂಡತಿಯನ್ನು ಕೊಲ್ಲುತ್ತಾನೆ. ಈಗೆಯೇ ದ್ವೇಷದಿಂದ ಜನ್ಮ ನಾಶ ಮಾಡಿಕೊಳ್ಳುವವರು ದಿನೇ ದಿನೇ ಹೆಚ್ಚಾಗುತ್ತಿದ್ದಾರೆ.

ನೀವು ಒಂದು ದಿವಸ ರೊಟ್ಟಿ ತಿನ್ನುತ್ತಿರುವಾಗ, ನಿಮ್ಮ ಹಲ್ಲು ಅಕಸ್ಮಾತ್

---

**"ದೃಷ್ಟೀಂ ಜ್ಞಾನಮಯೀ ಕೃತಪಶ್ಯೇದ್ ಬ್ರಹ್ಮಮಯಂ ಜಗತ್"**
ನಮ್ಮ ದೃಷ್ಟಿ ಜ್ಞಾನಮಯವಾದರೆ ಜಗತ್ತೆಲ್ಲಾ ಬ್ರಹ್ಮಮಯವಾಗುತ್ತದೆ

ನಾಲಿಗೆಯನ್ನು ಕಡಿಯಿತು. ಆಗ ಹಲ್ಲಿನ ಮೇಲಿನ ದ್ವೇಷದಿಂದ ಕಲ್ಲಿನಿಂದ ಹಲ್ಲನ್ನು ಜಜ್ಜಿ ಕೊಳ್ಳುತ್ತೀರಾ? ಇಲ್ಲವೇ ಇಲ್ಲ. ಏಕೆಂದರೆ ಹಲ್ಲು ನನ್ನದೇ ನಾಲಿಗೆಯೂ ನನ್ನದೇ. ಎರಡನ್ನು ಸಮಾನವಾಗಿ ನೋಡುವಂತೆ ಪ್ರಪಂಚದ ಸರ್ವಪ್ರಾಣಿಗಳನ್ನೂ ನಿನ್ನಂತೆ ನೋಡಿದಾಗ ದ್ವೇಷ ಇರುವುದಿಲ್ಲ. ಇದೇ ಗೀತೆಯ ಭಕ್ತನ ಲಕ್ಷಣ.

**ಉದಾ.:** ಹಿಂದೆ ನಮ್ಮ ಭಾರತ ದೇಶದಲ್ಲಿ ಒಬ್ಬ ದೊಡ್ಡ ವಿದ್ವಾಂಸನಿದ್ದ. ಅವನಿಗೆ ಒಬ್ಬನೇ ಮಗ, ಅವನು ದೊಡ್ಡವನಾಗಿ ಉತ್ತಮ ವಿದ್ವಾಂಸನಾದ. ಆದರೆ ತಂದೆಗೆ ಮಗನನ್ನು ಇನ್ನೂ ಪ್ರಖ್ಯಾತ ವಿದ್ವಾಂಸನನ್ನಾಗಿ ಮಾಡುವ ಆಸೆಯಿಂದ ಮಗನ ಎಲ್ಲಾ ಸಭೆ–ಸಮಾರಂಭಗಳಲ್ಲಿ ಅವನನ್ನು ಹೀಯಾಳಿಸುತ್ತಿದ್ದರು. ಅದನ್ನು ಮಗನು ಸಹಿಸಲಾರದೆ ದ್ವೇಷದಿಂದ ನಮ್ಮ ತಂದೆ ತನ್ನನ್ನು ಹೀಗೆ ಹೀಯಾಳಿಸುತ್ತಾರಲ್ಲ, ಅವರನ್ನು ಕೊಂದು ಹಾಕುವುದಕ್ಕೆ ತಯಾರಾಗಿ ತಂದೆ ತಾಯಿ ಮಲಗುವ ಮಂಚದ ಕೆಳಗೆ ಅವಿತುಕೊಂಡ. ಇದರ ಅರಿವಿಲ್ಲದೇ ತಾಯಿ, ತನ್ನ ಮಗನ ಪಾಂಡಿತ್ಯವನ್ನು ಏಕೆ ಹೀಗೆ ಹೀಯಾಳಿಸುತ್ತೀರಲ್ಲಾ ಎಂದಾಗ, ಆಗ ಪತಿಯು ಅಯ್ಯೋ ಹುಚ್ಚಿ! ನನ್ನ ಮಗ ಬಹಳ ವಿದ್ಯಾವಂತ. ಸರ್ವಶಾಸ್ತ್ರ ಕೋವಿದ. ಆತನಿಗೆ ಸರಿಗಟ್ಟುವವರು ಯಾರೂ ಇಲ್ಲ. ಆದರೂ ಸಹ ಅವನಿಗೆ ನಾನೇ ಸರ್ವ ಶ್ರೇಷ್ಠನೆಂದು ಅಹಂಕಾರವಿದೆ. ಅದರ ನಿವಾರಣೆಗಾಗಿ ಸಭೆ–ಸಮಾರಂಭಗಳಲ್ಲಿ ಅವನನ್ನು ಹೀಯಾಳಿಸುತ್ತಿದ್ದೇನೆ. ಅವನು ಅಹಂಕಾರವನ್ನು ಬಿಟ್ಟರೆ ಬಹಳ ಶ್ರೇಷ್ಠವಾದ ವಿದ್ವಾಂಸನಾಗುತ್ತಾನೆ. ಅದೇ ನನ್ನ ಆಸೆ ಎಂದು ಮಗನನ್ನು ಚೆನ್ನಾಗಿ ಹೊಗಳಿದ. ಅದನ್ನು ಕೇಳಿ ಮಂಚದ ಕೆಳಗೆ ಬಚ್ಚಿಟ್ಟುಕೊಂಡಿದ್ದ ಮಗನಿಗೆ ಬಹಳ ಪಶ್ಚಾತ್ತಾಪವಾಯಿತು. ಅಯ್ಯೋ ದ್ವೇಷ ಭಾವನೆಯಿಂದ ನನ್ನ ತಂದೆಯನ್ನೇ ಕೊಲ್ಲುವುದಕ್ಕೆ ಹೋಗಿದ್ದನೆಲ್ಲಾ ಎಂದು ರಾತ್ರಿ ಪೂರಾ ಅತ್ತ. ಬೆಳಿಗ್ಗೆ ತಂದೆ ತಾಯಿ ಏಳುವುದಕ್ಕೆ ಮುಂಚೆ ಎದ್ದು ಬಾಗಿಲಲ್ಲಿ ನಿಂತು, ಅವರಿಗೆ ನಮಸ್ಕರಿಸಿ, ತಂದೆ ! ನಿರಪರಾಧಿಯಾದ ತಂದೆಯನ್ನು ದ್ವೇಷದಿಂದ ಕೊಲ್ಲಲು ಸಿದ್ಧನಾದ ಮಗನಿಗೆ ನಿಮ್ಮ ಶಾಸ್ತ್ರದಲ್ಲಿ ಯಾವ ಶಿಕ್ಷೆ ಇದೆ ಎಂದ. ಅದಕ್ಕೆ ತಂದೆಯು ಅಂತಹ ಮಗನು ಹೆಂಡತಿ ಮನೆಯಲ್ಲಿ ಆರು ತಿಂಗಳ ಕಾಲ ಇರಬೇಕು. ಇದೇ ಶಿಕ್ಷೆ ಎಂದ. ಹಾಗಾದರೆ ನನಗೆ ಅಪ್ಪಣೆ ಕೊಡಿ, ಅಂತಹ ಮಗನೇ ನಾನೆಂದು ಎಲ್ಲಾ ವಿಷಯ ಹೇಳಿದ. ಆಗ ತಂದೆ ಸಾಂತ್ವನ ಹೇಳಿದರೂ ಕೇಳದೆ ಹೆಂಡತಿಯ ಮನೆಗೆ ಹೋದ. ಅದೆ ತಾನೇ ಲಗ್ನವಾಗಿತ್ತು. ಹೆಂಡತಿಯ ಮನೆಯಲ್ಲಿ ಅವನನ್ನು ಸ್ವಲ್ಪ ದಿವಸ ಚೆನ್ನಾಗಿ ನೋಡಿಕೊಂಡರು. ಬರು ಬರುತ್ತಾ ಅವನ ಮೇಲೆ ಉದಾಸೀನ ತೋರಿಸಿ ಹಸುಗಳನ್ನು ಕಾಯಲು ಕಾಡಿಗೆ ಅಟ್ಟಿದರು. ಮೊದಲೇ ವಿದ್ವಾಂಸ, ಅವರು ಎಲ್ಲಿ ಹೋದರೂ ಸಮಯವನ್ನು ನಿರರ್ಥಕವಾಗಿ ಕಳೆಯದೇ, ಮುತ್ತುಗದ ಎಲೆಗಳಲ್ಲಿ ಸಂಸ್ಕೃತ ಶ್ಲೋಕಗಳನ್ನು ಬರೆಯುತ್ತಾ ಬಂದ. ಒಂದು ದಿವಸ ಅವನ ಹೆಂಡತಿ ದೀಪಾವಳಿ ಹಬ್ಬಕ್ಕೆ ಸೀರೆ ತರಲು ಬೇಡಿದಳು. ಆಗ ಆ ವಿದ್ವಾಂಸನಲ್ಲಿ ಏನಿದೆ? ವಿದ್ವತ್ ಬಿಟ್ಟರೆ ಮತ್ತೇನು ಇಲ್ಲ. ವಿದ್ವತ್ ಉಪಯೋಗಿಸಿ

**"ತದ್ ವಿಜ್ಞಾನಾರ್ಥಂ ಸಗುರು ಮೇವಾಭಿ ಗಚ್ಛೇತ್ । ಸಮಿತ್ಪಾಣಿಃ ಶ್ರೋತ್ರೀಯಂ ಬ್ರಹ್ಮನಿಷ್ಠಂ"**
ಪರಮಾತ್ಮನನ್ನು ತಿಳಿಯಬೇಕಾದರೆ ಕೈಯಲ್ಲಿ ಸಮಿತ್ತನ್ನು ಹಿಡಿದುಕೊಂಡು ಶ್ರೋತ್ರೀಯ ಬ್ರಹ್ಮನಿಷ್ಠರಾದ ಸದ್ಗುರುವಿಗೇ ಶರಣಾಗಬೇಕು (ಮುಂಡಕ.ಉ.)



ಬರೆದ ಆ ಅರ್ಧ ಶ್ಲೋಕವನ್ನು ಇದನ್ನು ಯಾರಲ್ಲಾದರೂ ಅಡುವು ಇಟ್ಟು ನಿನಗೆ ಬೇಕಾದ ಬಟ್ಟೆ ಬರೆ ತೆಗೆದು ಕೋ ಎಂದ. ಆಕೆ ಅದನ್ನು ಒಬ್ಬ ರತ್ನ ವ್ಯಾಪಾರಿಯ ಮನೆಗೆ ಹೋಗಿ ಆ ಅರ್ಧ ಶ್ಲೋಕವನ್ನು ಕೊಟ್ಟು ಆ ವ್ಯಾಪಾರಿಯ ಹೆಂಡತಿಯಿಂದ ಸ್ವಲ್ಪ ಹಣವನ್ನು ಪಡೆದಳು. ಆ ವ್ಯಾಪಾರಿಯ ಹೆಂಡತಿ ಆ ಶ್ಲೋಕವನ್ನು ತಾನು ಮಲಗುವ ಮಂಚದ ಕಾಲಿಗೆ ದಾರದಿಂದ ಕಟ್ಟಿ ದಿನವೂ ನೋಡುತ್ತಾ ಇದ್ದಳು. ಒಂದು ದಿವಸ ಆ ವ್ಯಾಪಾರಿ ಹೆಂಡತಿ ಮಲಗಿದ್ದಾಳೆ. ಪಕ್ಕದಲ್ಲಿ ಆಕೆಯ ಹದಿನಾರು ವರ್ಷದ ಮಗ ಮಲಗಿದ್ದಾನೆ. ಆ ರತ್ನ ವ್ಯಾಪಾರಿ ಹದಿನಾರು ವರ್ಷದ ನಂತರ ವ್ಯಾಪಾರ ಮುಗಿಸಿ ಮನೆಗೆ ಬಂದು ನೋಡುತ್ತಾನೆ. ತನ್ನ ಹೆಂಡತಿ ಯಾರೋ ಪರಪುರುಷನೊಂದಿಗೆ ಮಲಗಿದ್ದಾಳೆಂದು ಸಿಟ್ಟು ಬಂದು ಕತ್ತಿ ತೆಗೆದು ಹೆಂಡತಿಯನ್ನು ಕೊಲ್ಲುವುದಕ್ಕೆ ಎಂದು ಕತ್ತಿ ತೆಗೆದಾಗ ಕತ್ತಿಯ ತುದಿಯು ಆ ಮಂಚಕ್ಕೆ ಕಟ್ಟಿದ ಶ್ಲೋಕವನ್ನು ಬರೆದ ಮುತ್ತುಗದ ಎಲೆ ಸಿಕ್ಕಿಕೊಂಡಿತು. ಅದನ್ನು ರತ್ನ ವ್ಯಾಪಾರಿ ನೋಡುತ್ತಾನೆ. ಅದರಲ್ಲಿ ಹೀಗೆ ಬರೆದಿದೆ. **"ಸಹಸಾ ವಿದಧೀತ ನ ಕ್ರಿಯಾಂ ಅವಿವೇಕಃ ಪರಮಾ ಪದಾಂ ಪದಮ್"**. ಇದರರ್ಥವೇನೆಂದರೆ ಯಾವುದೇ ಕಾರ್ಯವನ್ನು ಯೋಚಿಸದೆ ಒಂದೇ ಸಾರಿ ದುಡುಕಿ ಮಾಡಬಾರದು. ಅವಿವೇಕವು ಆಪತ್ತಿಗೆ ಕಾರಣವಾಗುವುದು ಎಂದು ಬರೆದಿತ್ತು. ತಕ್ಷಣ ಅವನ ಕತ್ತಿ ಕೆಳಗೆ ಇಳಿಯಿತು. ಹೆಂಡತಿಯನ್ನು ಎಬ್ಬಿಸಿದ. ಅವಳು ಎದ್ದು ಪಕ್ಕದಲ್ಲಿದ್ದ ಮಗನಿಗೆ, ನಿಮ್ಮ ತಂದೆಗೆ ನಮಸ್ಕರಿಸು ಎಂದಳು. ಅವನು ವ್ಯಾಪಾರಕ್ಕೆ ಹೊರಟಾಗ ಅವರ ಹೆಂಡತಿಯು ಮೂರು ತಿಂಗಳ ಗರ್ಭಿಣಿಯಾಗಿದ್ದಳು. ಈಗ 16 ವರ್ಷದ ಮಗ. ಆ ವ್ಯಾಪಾರಿಗೆ ಆಶ್ಚರ್ಯವಾಯಿತು. ಈ ಅರ್ಧ ಶ್ಲೋಕ ಎಷ್ಟು ಉಪಕಾರ ಮಾಡಿತು. ಇಲ್ಲದೇ ಇದ್ದರೆ ಇಬ್ಬರನ್ನೂ ಕೊಂದು ಹಾಕುತ್ತಿದ್ದೆ ಎಂದು ಆ ಶ್ಲೋಕವನ್ನು ಬರೆದ ವಿದ್ವಾಂಸನನ್ನು ಕರೆಸಿದ. ಅವನಿಗೆ ಪಾದ ಪೂಜೆ ಮಾಡಿ ಯಥೇಚ್ಛವಾಗಿ ಹಣವನ್ನು ಕೊಟ್ಟನು. ಆ ವಿದ್ವಾಂಸ ಯಾರೆಂದರೆ ಅವನೇ ಪ್ರಖ್ಯಾತ ಕವಿ ಭಾರವಿ. ಆ ಶ್ಲೋಕವು ಕಿರಾತಾರ್ಜುನೀಯ ಕಾವ್ಯದ ಒಂದು ಅರ್ಧ ಶ್ಲೋಕ. ದ್ವೇಷದಿಂದಾಗುವ ಭಾರೀ ಅನಾಹುತ ತಪ್ಪಿ ಹೋಯಿತು.

ಭಗವಂತನ ಭಕ್ತನಾಗುವುವನಿಗೆ ಮೊದಲನೆಯದಾಗಿ, ಎಲ್ಲಾ ಪ್ರಾಣಿ, ಪಕ್ಷಿ, ಮನುಷ್ಯರಲ್ಲಿ ದ್ವೇಷ ಭಾವನೆ ಇರಬಾರದು. ಇನ್ನೊಂದು ಉದಾಹರಣೆ ನೋಡೋಣ.

**ಉದಾ.:** ಒಂದು ಊರಿನಲ್ಲಿ ಇಬ್ಬರು ಸ್ನೇಹಿತರಿದ್ದರು. ಆದರೆ ಮನಸ್ಸಿನಲ್ಲಿಯೇ ದ್ವೇಷ ಭಾವನೆ ಇತ್ತು. ಅವನನ್ನು ಹಾಳು ಮಾಡಬೇಕೆಂದು ಇವನು. ಇವನನ್ನು ಹಾಳು ಮಾಡಬೇಕೆಂದು ಅವನು. ಹೀಗೆಯೇ ಅವರ ದ್ವೇಷ ಭಾವನೆ ದಿನದಿಂದ ದಿನಕ್ಕೂ ಜಾಸ್ತಿ ಆಗುತ್ತಾ ಹೋಯಿತು. ಒಂದು ಸಾರಿ ಅವರಿಬ್ಬರೂ ದೇವರನ್ನು ಕುರಿತು ತಪಸ್ಸು ಮಾಡಬೇಕೆಂದು ನಿಶ್ಚಯಿಸಿ ಒಬ್ಬ ಒಂದು ಪರ್ವತದ ಮೇಲೆ ಇನ್ನೊಬ್ಬ ಮತ್ತೊಂದು ಪರ್ವತದ ಮೇಲೆ ಕುಳಿತುಕೊಂಡು ತಪಸ್ಸು ಮಾಡಿದರು. ಯಾವ ಉದ್ದೇಶದಿಂದ ತಪಸ್ಸು

**"ಉತ್ತಿಷ್ಠಿತ ಜಾಗ್ರತಾ ಪಾಪವರಾನ್ನಿ ಭೋದಿತಾ"**
ಎಳ ಎದ್ದೇಳ ಜಾಗ್ರತರಾಗಿರಿ ಯೋಗ್ಯರಾದ ಶ್ರೋತ್ರೀಯ ಬ್ರಹ್ಮನಿಷ್ಟರಾದ ಗುರುಗಳನ್ನು ಸೇರಿ, ಉದ್ಧಾರ ಮಾಡಿಕೊಳ್ಳಿರಿ (ಕಠ.ಉ.)

ಮಾಡಿದರೂ ಭಗವಂತನು ಬಂದೇ ಬರುತ್ತಾನೆ. ಭಗವಂತನು ಪ್ರತ್ಯಕ್ಷನಾಗಿ ಏನಪ್ಪ! ನಿನಗೆ ಏನು ಬೇಕು? ಏಕೆ ನನ್ನನ್ನು ತಪಸ್ಸಿನ ಮೂಲಕ ಪ್ರಾರ್ಥಿಸಿಕೊಂಡೆ? ಸ್ವಾಮಿ ತಾವು ನೇರವಾಗಿ ಇಲ್ಲಿಗೆ ಬಂದಿರಾ? ಅಥವಾ ನನ್ನ ಸ್ನೇಹಿತನ ಹತ್ತಿರ ಹೋಗಿದ್ದೀರಾ? ಇಲ್ಲ ಮೊದಲು ಇಲ್ಲಿಗೆ ಬಂದೆ. ಹಾಗಾದರೆ ನನ್ನ ಸ್ನೇಹಿತ ಪರ್ವತದ ಆಚೆ ಕಡೆ ತಪಸ್ಸು ಮಾಡುತ್ತಿದ್ದಾನೆ. ಅವನಲ್ಲಿ ಹೋಗಿ ನಂತರ ನನ್ನಲ್ಲಿಗೆ ಬನ್ನಿ. ಏಕೆಂದರೆ ಅವನು ನನಗಿಂತಲೂ ಹೆಚ್ಚಾಗಿ ಬೇಡಿದರೆ ನನಗೆ ಸ್ವಲ್ಪ ಸಿಕ್ಕಂತಾಗುತ್ತದೆ ಎಂದ. ಆಗ ಭಗವಂತ ಪಕ್ಕದ ಪರ್ವತದ ಕಡೆಗ ಹೋಗಿ, ಏನಪ್ಪ ನಿನಗೆ ಏನು ಬೇಕು? ಅವನೂ ಸಹ ಇವನಂತೆ ಸ್ವಾಮಿ ನೇರವಾಗಿ ಇಲ್ಲಿಗೆ ಬಂದಿರಾ? ಇಲ್ಲ ಪಕ್ಕದವನಲ್ಲಿಗೆ ಹೋಗಿ ಬಂದಿರಾ? ಹೌದು ಅವನಲ್ಲಿಗೆ ಹೋಗಿದ್ದೆ. ಆದರೆ ಅವನು ನೀನು ಏನು ಬೇಡುತ್ತೀಯೋ ಅದನ್ನು ನೋಡಿ ಅವನು ಕೇಳುತ್ತಾನಂತೆ ಎಂದ. ಸ್ವಾಮಿ ಪದೇ ಪದೇ ಬರಬೇಡಿರಿ. ಅವನಿಗೆ ಏನು ಕೊಡುತ್ತೀರೋ ಅದರ ಎರಡರಷ್ಟು ನನಗೆ ಅಲ್ಲಿಯೋ ಕೊಟ್ಟು ಹೋಗಿ ಎಂದ. ಸರಿ ಭಗವಂತ ಮೊದಲಿಗನ ಹತ್ತಿರ ಬಂದ. ಸ್ವಾಮಿ ಅವನು ಏನು ಬೇಡಿದ? ಏನೂ ಇಲ್ಲ. **ನೀನು ಏನೂ ಬೇಡುತ್ತೀಯಾ ಅದರ ಎರಡರಷ್ಟು ದಯಪಾಲಿಸಿ ಅಂದ. ಹಾಗಾದರೆ ಸ್ವಾಮಿ ನನಗೆ ಒಂದು ಕಣ್ಣು ಹೋಗಲಿ ಎಂದ. ಅವನಿಗೆ ಎರಡೂ ಕಣ್ಣು ಹೋಗುತ್ತದೆ.** ಇದೇ ದ್ವೇಷ. ಇದೇ ಅಸೂಯೆ.

ಮಹಾಭಾರತದಲ್ಲಿ ಕೌರವರ ಅಗ್ರಜನಾದ ದುರ್ಯೋಧನನು ಪಾಂಡವರ ಮೇಲಿನ ದ್ವೇಷದಿಂದ ಅವರನ್ನು ನಾಶ ಮಾಡಲು ವಿಷ ಹಾಕಿದ, ಅರಗಿನ ಮನೆಯಲ್ಲಿ ಮೋಸದಿಂದ ಕೂಡಿ ಹಾಕಿ ಬೆಂಕಿ ಹಾಕಿದ, ಮೋಸದಿಂದ ಜೂಜಾಡಿ 12 ವರ್ಷ ವನವಾಸ 1 ವರ್ಷ ಅಜ್ಞಾತವಾಸ ಮಾಡಿಸಿದ. ದೂರ್ವಾಸರಿಂದ ಪಾಂಡವರಿಗೆ ಶಾಪ ಕೊಡಿಸಲು ಅವರನ್ನು ವನವಾಸದಲ್ಲಿದ್ದ ಪಾಂಡವರ ಹತ್ತಿರ ಸತ್ಕಾರ ಮಾಡಿಸಿಕೊಳ್ಳುವಂತೆ ಮಾಡಿದ. ಹೀಗೆ ಹುಟ್ಟಿದಾಗಿನಿಂದ ಸಾಯುವವರೆಗೂ ಪಾಂಡವರ ಮೇಲೆ ದ್ವೇಷ ಸಾಧಿಸಿದ. ಅಂತ್ಯದಲ್ಲಿ ಏನಾಯಿತು? ಎರಡೂ ಕಡೆಯ 18 ಅಕ್ಷೋಹಿಣಿ ಸೈನ್ಯ ನಾಶವಾಯಿತು. ಆಮೇಲೆ ಕೊನೆಗೆ ಎಲ್ಲರನ್ನೂ ಕಳೆದುಕೊಂಡು ಹೆದರಿಕೆಯಿಂದ ದ್ವೈಪಾಯನ ಸರೋವರದಲ್ಲಿ ಅಡಗಿಕೊಂಡ. ನಂತರ ಭೀಮನ ಮೂದಲಿಕೆಗೆ ಸಿಟ್ಟಾಗಿ ಸರೋವರದಿಂದ ಹೊರಗೆ ಬಂದು ಅವನ ಜೊತೆ ಗದಾಯುದ್ಧದಲ್ಲಿ ತೊಡೆ ಮುರಿದು ರಣರಂಗದಲ್ಲಿ ಏಕಾಂಗಿಯಾಗಿ ಬಿದ್ದಿದ್ದ ಏನಾಯಿತು? ಅವನ ದ್ವೇಷ, ಅದು ಅವನನ್ನೇ ನಾಶ ಮಾಡಿತು.

ಆದ್ದರಿಂದ ಇನ್ನೊಬ್ಬರ ಮೇಲೆ ದ್ವೇಷ ಸಾಧಿಸಿದರೆ ಅದು ಅವನನ್ನೇ ಸರ್ವನಾಶ ಮಾಡುತ್ತದೆ. ದ್ವೇಷವು ಇಂತಹ ಅಪಾಯಕರವಾದುದು. ರಾಮಾಯಣದಲ್ಲಿ ವಾಲಿಯು ತನ್ನ ತಮ್ಮ ಸುಗ್ರೀವನ ಮೇಲೆ ದ್ವೇಷ ಸಾಧಿಸಿ ಅವನನ್ನು ರಾಜ್ಯದಿಂದ ಹೊರಗೆ ಅಟ್ಟಿ,

---

**''ನ ಕರ್ಮಣಾನ ಪ್ರಜಯಾಧನೇನ ತ್ಯಾಗೇನೈಕೇ ಅಮೃತತ್ವ ಮಾನಶುಃ''**
ಕರ್ಮದಿಂದಾಗಲೀ, ಮಕ್ಕಳಿಂದಾಗಲೀ, ಹಣ, ವಸ್ತು, ವಾಹನ, ಹೆಂಡತಿಯಿಂದಾಗಲೀ ಶಾಂತಿ ಸುಖವಿಲ್ಲ. ಕೇವಲ ತ್ಯಾಗದಿಂದಲೇ ಅಮೃತತ್ವ ದೊರೆಯುವುದು (ಕೈವಲ್ಯ ಉ.)



ಅವನ ಹೆಂಡತಿ ರಮೆಯನ್ನು ತನ್ನಲ್ಲಿ ಇಟ್ಟುಕೊಂಡ. ಕೊನೆಗೆ ವಾಲಿಯ ಸಂಹಾರದಿಂದ ಅವನ ದ್ವೇಷ ನಿವಾರಣೆಯಾಯಿತು.

ಹೀಗೆ ದ್ವೇಷದಿಂದ ಆಗುವ ಅನಾಹುತಗಳು ಅಷ್ಟಿಷ್ಟಲ್ಲ. ಗಂಡ ಹೆಂಡತಿಯನ್ನು ಕೊಲ್ಲುವುದು. ಹೆಂಡತಿ–ಗಂಡನನ್ನು ಕೊಲ್ಲುವುದು. ಮಕ್ಕಳು ತಂದೆ ತಾಯಿಯರನ್ನು ಕೊಲ್ಲುವುದು. ದ್ವೇಷವಿದ್ದಾಗ ತಂದೆ, ತಾಯಿ, ಸೋದರ, ಸೋದರಿಯರು, ಬಂಧು–ಬಾಂಧವರು, ಸ್ನೇಹಿತರು ಹೀಗೆ ಯಾವ ಬಾಂಧವ್ಯವೂ ದ್ವೇಷದ ಮುಂದೆ ನಾಶವಾಗಿ ಹೋಗುತ್ತದೆ. ಆದ್ದರಿಂದಲೇ ಭಗವಂತನು ನಮ್ಮನ್ನು ಎಚ್ಚರಿಸಿದ್ದಾನೆ ಹಾಗೂ ಸರಿದಾರಿಯಲ್ಲಿ ಹೋಗುವುದಕ್ಕೆ ಪ್ರೇರೇಪಣೆ ಕೊಟ್ಟು **''ಅದ್ವೇಷ್ಟಾ ಸರ್ವಭೂತಾನಾಂ''** ಎಂದಿದ್ದಾನೆ. ಈ ಜಗತ್ತಿನಲ್ಲಿರುವ ಸಕಲ ಚರಾಚರ ವಸ್ತುಗಳ ಮೇಲೆ ದ್ವೇಷವಿಟ್ಟುಕೊಳ್ಳಬೇಡ. ಆಗ ತಾನೇ ತಾನಾಗಿ ನನ್ನ ಭಕ್ತನಾಗುತ್ತೀಯೆ, ಎಂದು ಭಕ್ತನ ಮೊದಲನೆಯ ಲಕ್ಷಣವನ್ನು ಹೇಳಿದ್ದಾನೆ.

ನಾವೆಲ್ಲರೂ ಈ ದ್ವೇಷ ಭಾವನೆ ಬಿಟ್ಟು ಎಲ್ಲಾ ಭೂತಗಳಲ್ಲಿಯೂ ಮಿತ್ರತ್ವ ಭಾವನೆ ಬೆಳೆಸಿಕೊಳ್ಳೋಣ. ಇದನ್ನು ಮುಂದಿನ ಸಂಚಿಕೆಯಲ್ಲಿ ವಿಸ್ತಾರವಾಗಿ ಭಕ್ತನ ಎರಡನೆಯ ಲಕ್ಷಣವಾದ ಮಿತ್ರತ್ವ (ಮೈತ್ರ)ವನ್ನು ನೋಡೋಣ. [**ಮುಂದುವರಿಯುವುದು**]

**ಓಂ ತತ್ಸತ್**

# ಗುಹ್ಯತಮ ವಿಜ್ಞಾನ

**–ಶ್ರೀ ಶಂಕರಾನಂದ ಮೂರ್ತಿ, ಬೆಂಗಳೂರು**

ಆತ್ಮೀಯರೆ! ಈ ಸಂಚಿಕೆಯಲ್ಲಿ ವಿಶ್ವಮಾನ್ಯ ಗ್ರಂಥವಾದ ಶ್ರೀಮದ್ಭಗವದ್ಗೀತೆಯ 9ನೇ ಅಧ್ಯಾಯದ 1ನೇ ಶ್ಲೋಕವನ್ನು ವಿಚಾರ ಮಾಡೋಣ.

**ಶ್ರೀ ಭಗವಾನುವಾಚ –**

**ಇದಂ ತು ತೇ ಗುಹ್ಯತಮಂ ಪ್ರವಕ್ಷ್ಯಾಮ್ಯನಸೂಯವೇ ।**

**ಜ್ಞಾನಂ ವಿಜ್ಞಾನ ಸಹಿತಂ ಯಜ್ಞಾತ್ವಾ ಮೋಕ್ಷ್ಯಸೇ ಶುಭಾತ್ ॥ 1 ॥**

ಶ್ರೀ ಭಗವಂತನು ಹೇಳಿದನು –

ಯಾವುದನ್ನು ತಿಳಿದುಕೊಂಡರೆ ಅಶುಭ ಸಂಸಾರದಿಂದ ಬಿಡುಗಡೆ ಹೊಂದುತ್ತೀಯೋ ಅಂತಹ ಗುಹ್ಯತಮವಾದ ವಿಜ್ಞಾನ ಸಹಿತವಾದ ಜ್ಞಾನವನ್ನು ಅಸೂಯ ರಹಿತನಾದ ನಿನಗೆ ಹೇಳುತ್ತೇನೆ.

ಈ ಶ್ಲೋಕ ಪರಮ ಪವಿತ್ರವಾದ ಶ್ಲೋಕ. ಏಕೆಂದರೆ ಅರ್ಜುನನ ಪ್ರಶ್ನೆಗೆ

---

**''ಅಹಮಾತ್ಮ ಗುಡಾಕೇಶ ಸರ್ವಭೂತ ಶಯಸ್ಥಿತಃ''**
ಎಲ್ಲಾ ಭೂತಗಳಲ್ಲಿ ನಾನೆಂದು ವ್ಯಕ್ತವಾಗುವ ಆತ್ಮನೆ ಪರಮಾತ್ಮ, ಅದೇ ಭಗವಂತನ ನಿಜವಾದ ಸ್ವರೂಪ (ಗೀತೆ 10–20)

ಪ್ರೇರೇಪಿತನಾಗಿ ಭಗವಂತನು ಉತ್ತರವನ್ನು ಹೇಳುತ್ತಾನೆ. ಆದರೆ ಈ ಅಧ್ಯಾಯದಲ್ಲಿ ನೇರವಾಗಿ ಭಗವಂತನೇ ಶಿಷ್ಯನ ಪ್ರಶ್ನೆಗೆ ಪ್ರೇರೇಪಿತನಾಗಿ ಹೇಳುವ ಅಧ್ಯಾಯವಲ್ಲ. ಇದು ಭಗವಂತನೆ ಅರ್ಜುನನ ಮೇಲಿನ ಪ್ರೇಮದಿಂದ ಪ್ರೇರೇಪಿತನಾಗಿ ಈ ಗೂಢವಾದ ಮತ್ತು ಗಾಢವಾದ ಈ ಅಧ್ಯಾಯವನ್ನು ಬೋಧಿಸಿದ್ದಾನೆ. ಏಕೆಂದರೆ **"ಕೃಷ್ಣಂ ವಂದೇ ಜಗದ್ಗುರುಮ್"** ಎಂಬ ಜಗದ್ಗುರು ಮಾತು ಶ್ರೀಕೃಷ್ಣನಿಗೆ ಸಲ್ಲತಕ್ಕದ್ದು. ಮಕ್ಕಳು ಅತ್ತ ಮೇಲೆ ಕೆಲವು ತಾಯಂದಿರು ತಮ್ಮ ಎದೆ ಹಾಲನ್ನು ಕೊಡುತ್ತಾರೆ. ಕೆಲವು ಮಾತೆಯರು ಮಕ್ಕಳನ್ನು ಸುಸಜ್ಜಿತವಾಗಿ ಬೆಳಸಿ ಮಕ್ಕಳು ಕೇಳದೆ ಹೋದರು ಕಾಲಕ್ಕೆ ಸರಿಯಾಗಿ ತಮ್ಮ ಎದೆ ಹಾಲನ್ನು ಕೊಡುತ್ತಾರೆ. ಹಾಗೆಯೇ ಭಗವಂತನು ಅರ್ಜುನನು ಬೇಡದೆ ಹೋದರೆ ಅರ್ಜುನನ ಅಂತಃಕರಣಕ್ಕೆ ಸಾಕ್ಷಿಯಾದ ಭಗವಂತನು ಅವನ ಹೃದಯದಲ್ಲಿ ಯಾವ ಬಯಕೆ ಇದೆಯೋ ಅದನ್ನು ಪೂರ್ಣ ಮಾಡುತ್ತಾನೆ. **ಇದಮ್ – ಇದಂ** ಎಂದರೆ ಈ ಅಧ್ಯಾಯದಲ್ಲಿ ಕರ್ಮಾತೀತನ ವಿಷಯವನ್ನು ಹೇಳುವ ಪದ ಬಂದಿದೆ. ತೀರ ಹತ್ತಿರದ ಪದಾರ್ಥವನ್ನು ಕುರಿತು ಮಾತನಾಡುವಾಗ **'ಇದು'** ಎನ್ನುವುದು ಸಂಪ್ರದಾಯ. ಇಲ್ಲಿ ಭಗವಂತನು 9ನೇ ಅಧ್ಯಾಯವನ್ನು ಕುರಿತು ಇದರಲ್ಲಿ ಹೇಳಿರುವ ಜ್ಞಾನವನ್ನು ಕುರಿತು **"ಇದಮ್"** ಎಂದು ಹೇಳಿದ್ದಾನೆ. ಅಸಾಧಾರಣವಾದ ಅನನ್ಯ ಭಕ್ತಿಯಿಂದ ಜ್ಞಾನವನ್ನು ಕುರಿತು **'ಇದಮ್'** ಎಂದಿದ್ದಾನೆ.

ಭಗವಂತನು ಜ್ಞಾನವನ್ನು ಕುರಿತು ಹೇಳುವಾಗ **'ಇದಂ'** ಪದವನ್ನು ಉಪಯೋಗ ಮಾಡಿದ್ದಾನೆ. **"ಇದಮ್"** ಎಂದರೆ ಎಲ್ಲೆಲ್ಲಿಯೂ ವ್ಯಾಪಕವಾಗಿರುವ ಜ್ಞಾನವನ್ನು ಕುರಿತು **'ಇದಂ'** ಎಂದು ಹೇಳಿದ್ದಾನೆ. ಇದು ಎಂಬ ಜ್ಞಾನವು ಸರ್ವರಿಗೂ ದೊರೆಯಲಿ ಎಂಬುವುದೇ ಭಗವಂತನ ಆಸೆ.

ಉಪನಿಷತ್ತಿನಲ್ಲಿ **"ಅಯಮಾತ್ಮ ಬ್ರಹ್ಮ"** ಇಲ್ಲಿ **'ಅಯಮ್'** ಪದವು ಚೇತನ ಭೂತವಾದ ಆತ್ಮನನ್ನು ಕುರಿತು ಬೋಧೆ ಮಾಡಿರುವ ಪದ, ಅದರಲ್ಲಿ ಇಲ್ಲಿಯೂ ಸಹ ಭಗವಂತನು, **'ಇದಮ್'** ಜ್ಞಾನವನ್ನು ನಿನ್ನ ಸ್ವರೂಪವಾದ ಜ್ಞಾನವನ್ನು ತಿಳಿಸುವುದಕ್ಕಾಗಿ **'ಇದಮ್'** ಎಂದಿದ್ದಾರೆ.

**ಪ್ರಶ್ನೆ : ಇಲ್ಲಿ 'ತು' ಎಂಬ ಪದ ಬಂದಿದೆ?**

**ಉ.:** "ತು" ಅಂದರೆ ಇದಾದರೋ, ಅಂದರೆ ಹಿಂದಿನ 8ನೇ ಅಧ್ಯಾಯದ ವಿಷಯವೇ ಬೇರೆ, ಈ 9ನೇ ಅಧ್ಯಾಯದ ವಿಷಯವೇ ಬೇರೆ ಎಂದು ವಿಷಯವನ್ನು ಬೇರ್ಪಡಿಸಲು 'ತು' ಎಂಬ ಪದವು ಬಂದಿದೆ.

**ಪ್ರ.: ಹಾಗಾದರೆ 8ನೇ ಅಧ್ಯಾಯವು ಏನನ್ನು ಹೇಳುತ್ತದೆ?**

**ಉ.:** ಹಿಂದೆ 8ನೇ ಅಧ್ಯಾಯದಲ್ಲಿ 'ಧ್ಯೇಯ ಬ್ರಹ್ಮದ' ಉಪಾಸನೆಯನ್ನು ಹೇಳಿದೆ ಆ

---

**"ಜಂತೂನಾಂ ನರಂ ಜನ್ಮ ದುರ್ಲಭಂ"**
ಜಗತ್ತಿನ ಎಲ್ಲಾ ಜೀವರಾಶಿಗಳಲ್ಲಿ ಮನುಷ್ಯ ಜನ್ಮ ಬಹು ದುರ್ಲಭ
(ವಿವೇಕ ಚೂಡಾಮಣಿ)



ಧ್ಯೇಯ ಬ್ರಹ್ಮ ಉಪಾಸನೆಯಿಂದ ಬ್ರಹ್ಮಲೋಕ ಪ್ರಾಪ್ತಿಯಾಗುತ್ತದೆ. ಅಲ್ಲಿ ಕೆಲವು ದಿವಸ ಇದ್ದು ಭೋಗವನ್ನು ಅನುಭವಿಸಿ ನಂತರ ಮೋಕ್ಷವಾಗುತ್ತದೆಂದು ಧ್ಯೇಯ ಬ್ರಹ್ಮದ ಉಪಾಸನೆಯನ್ನು ಹೇಳಿದೆ ಕರ್ಮಭ್ರಷ್ಟಿ, ಕರ್ಮಿ, ಕರ್ಮಯೋಗಿಗಳ ವಿಷಯ ಪ್ರತಿಪಾದಿಸಿದೆ. ಆದರೆ ಈ ಅಧ್ಯಾಯದ ವಿಷಯ ವಿಲಕ್ಷಣವಾದುದೆಂದು ತಿಳಿಸಲು 'ತು' ಎಂಬ ಪದ ಬಂದಿದೆ.

ಇನ್ನೂ 9ನೇ ಅಧ್ಯಾಯದಲ್ಲಿ ಜ್ಞೇಯ ಬ್ರಹ್ಮ ವಿಷಯವನ್ನು ಪ್ರತಿಪಾದನೆ ಮಾಡಿದೆ. ಪ್ರಪಂಚದ ಜನಸಂಖ್ಯೆಯನ್ನು ನಾಲ್ಕು ವಿಧವಾಗಿ ವಿಂಗಡಿಸಲಾಗಿದೆ. 1) ಕರ್ಮ ಭ್ರಷ್ಟ, 2) ಕರ್ಮಿ, 3) ಕರ್ಮಯೋಗಿ, 4) ಕರ್ಮಾತೀತ.

**1) ಕರ್ಮ ಭ್ರಷ್ಟ :** ಕರ್ಮ ಭ್ರಷ್ಟನಿಗೆ ಯಾವ ವಿವೇಕವು ಬೇಕಾಗಿಲ್ಲ. ಯಾವ ಶಾಸ್ತ್ರವೂ ಬೇಕಾಗಿಲ್ಲ. ಯಾವ ಗುರುಗಳು ಬೇಕಾಗಿಲ್ಲ. ಯಾವ ಬೋಧೆಯೂ ಬೇಕಾಗಿಲ್ಲ. ಇವರು ಇನ್ನೊಬ್ಬರ ಕರ್ಮಫಲವನ್ನು ಅನುಭವಿಸುತ್ತಾ ಇರುತ್ತಾರೆ. ಇವರು ಇಲ್ಲಿಯೇ ಹುಟ್ಟಿ ಪ್ರಾಣಿಗಳಂತೆ ಜೀವನವನ್ನು ಮಾಡಿ ತೃಣ ಜಲಕ ಹುಳುವಿನಂತೆ ಮತ್ತೊಂದು ದೇಹವನ್ನು ಸೇರುತ್ತಾರೆ. ಇವರಿಗೆ ದಿನಕ್ಕೊಂದು ದೇಹ ಆದರೂ ಆಗಬಹುದು. ಇವರೇ ಕರ್ಮ ಭ್ರಷ್ಟರು.

**2) ಕರ್ಮಿಗಳು :** ಇವರು ಶಾಸ್ತ್ರೋಕ್ತವಾದ ಕರ್ಮವನ್ನೇ ಮಾಡುತ್ತಾರೆ. ಆದರೆ ಕರ್ಮದಿಂದ ಬರುವ ಫಲವನ್ನು ಬೇಡುತ್ತಾ ತಾವು ಪಡೆದ ಕರ್ಮಫಲವನ್ನು ಇನ್ನೊಬ್ಬರಿಗೆ ಕೊಡದೇ ತಾವೊಬ್ಬರೇ ಅನುಭವಿಸುತ್ತಾರೆ. ಇವರಿಗೆ ಲೋಕ ಲೋಕಾಂತರ ಗಮನ ಉಂಟು. ಹುಟ್ಟು ಸಾವುಗಳು ಉಂಟು.

**3) ಕರ್ಮ ಯೋಗಿ :** ಇವರು ಶಾಸ್ತ್ರೋಕ್ತ ಕರ್ಮವನ್ನು ಮಾಡಿ ಕರ್ಮ ಫಲವನ್ನೆಲ್ಲಾ ತ್ಯಾಗ ಮಾಡುತ್ತಾರೆ. ಇವರೇ ಕರ್ಮ ಯೋಗಿಗಳು. ಇವರ ಕರ್ಮದಿಂದ ಮತ್ತೊಬ್ಬರಿಗೆ ಮಹತ್ತದ ಉಪಕಾರವಾಗುತ್ತದೆ.

**4) ಕರ್ಮಾತೀತ :** ಇವನೇ ಜೀವನ್ಮುಕ್ತನು. ಇವನಿಗೆ ಯಾರು ದಾರಿಯನ್ನು ತೋರಿಸುವುದು ಬೇಕಾಗಿಲ್ಲ. ಇವನು ಹೋಗಿದ್ದೆ ದಾರಿ, ಮಾತನಾಡಿದ್ದೇ ಶಾಸ್ತ್ರ. ಮುಳುಗಿದ್ದೆ ಗಂಗೆ, ಎಲ್ಲೆಲ್ಲಿ ದೃಷ್ಟಿ ಹೋಗುತ್ತದೆಯೋ ಅಲ್ಲೆಲ್ಲಾ ತನ್ನ ಸ್ವರೂಪ, ತಾನು ಇರುವ ಸ್ಥಳವೇ ಕಾಶಿ. ಅವನಿಗೆ ಯಾವ ನೇಮವು ಇಲ್ಲ. ಅವನು ವೇದವನ್ನು ಮೀರಿದ್ದಾನೆ. ಗೀತೆ (2–45). **"ತ್ರೈಗುಣ್ಯ ವಿಷಯವೇದಾಃ ನಿಸ್ತ್ರೈಗುಣ್ಯೋ ಭವಾರ್ಜುನ"** ಅಂತಹ ಮಹನೀಯರು ಇದ್ದ ಸ್ಥಳವೇ ಸರ್ವಸ್ವ, ಅವನ ಪಾದ ಸೋಂಕಿದ ನೀರೇ ಪವಿತ್ರವಾದ ಗಂಗೇ. ಇವನಿಗೆ ಸಾಯುವ ಪ್ರಸಂಗವೇ ಇಲ್ಲ. ಎಂದೆಂದು ಸಾಯದ ಆತ್ಮವೇ ತಾನೆಂದು ತಿಳಿದಿರುತ್ತಾನೆ. (ಬೃ.ಉ. 4.4.) **"ನ ತಸ್ಯ ಪ್ರಾಣಾಃ ಹ್ಯುತ್ಕ್ರಾಮಂತೇ**

---

**"ಮುಕ್ತಿರ್ನೋ ಶತಕೋಟಿ ಜನ್ಮ ಸುಕೃತ್ಯೈಃ ಪುಣ್ಯೈರ್ವಿನಾ ಲಭ್ಯತೇ'**
ಮೋಕ್ಷವು ನೂರು ಕೋಟಿ ಜನ್ಮಗಳಲ್ಲಿ ಸಂಪಾದಿಸಿದ ಪುಣ್ಯವಿಲ್ಲದೇ
ಲಭಿಸುವುದಿಲ್ಲ (ವಿವೇಕ ಚೂಡಾಮಣಿ)

**ಅತ್ರೈವ ಬ್ರಹ್ಮ ಸಮಲೀಯಂತೇ''** ಅವನ ಪ್ರಾಣಾದಿಗಳು ದೇಹ ಬಿಟ್ಟು ಹೊರಗೆ ಹೋಗುವುದೇ ಇಲ್ಲ. ಅಲ್ಲಿಯೇ ಬ್ರಹ್ಮಕಾರವೇ ಆಗುತ್ತವೆ. ಆ ಪ್ರಾಣಾದಿಗಳು ಲಿಂಗ ಶರೀರದ ರೂಪದಲ್ಲಿರುವವರೆಗೆ ಅವು ತಮ್ಮ ತಮ್ಮ ಕೆಲಸವನ್ನು ಮಾಡುತ್ತವೆ. ಆದರೆ ಅವು ಪರಮಾತ್ಮನ ಸ್ವರೂಪವಾದರೆ ಇದ್ದಲ್ಲಿಯೇ ಬ್ರಹ್ಮ ಸ್ವರೂಪವೇ ಆಗುತ್ತವೆ. ಇವನೇ ಕರ್ಮಾತೀತ. ಇವರೇ ಜಗತ್ತಿಗೆ ಗುರುಗಳು. ಇಂತಹ ಕರ್ಮಾತೀತನ ವಿಷಯವನ್ನು ಈ 9ನೇ ಅಧ್ಯಾಯದಲ್ಲಿ ಹೇಳುವುದಕ್ಕಾಗಿ **'ತು'** ಎಂಬ ಪದ ಬಂದಿದೆ.

**'ತೇ'** ಅಂದರೆ ನಿನಗೆ, ಯಾವ ನಿನಗೆ? ಅಸೂಯ ರಹಿತವಾದ ನಿನಗೆ ಜ್ಞಾನವನ್ನು ಕೇಳಬೇಕಾದರೆ ಅಸೂಯ ಇರಬಾರದು. ಇದರಿಂದ ಹುಟ್ಟು, ಸಾವುಗಳ ಸುಳಿಯಿಂದ ಬಿಡುಗಡೆ ಹೊಂದುತ್ತೀಯ.

ಈ ಶ್ಲೋಕದಲ್ಲಿ ಶಾಸ್ತ್ರ ಮರ್ಯಾದೆಯಂತೆ ಅನುಬಂಧ ಚತುಷ್ಟಯಗಳು ಇವೆ. ಈ ಶ್ಲೋಕವೇ ಒಂದು ಶಾಸ್ತ್ರ. ಅನುಬಂಧ ಚತುಷ್ಟಯ ಇಲ್ಲದ ಶಾಸ್ತ್ರವನ್ನು ಬುದ್ಧಿವಂತರು ಓದಬಾರದು.

**ಪ್ರ. : ಅನುಬಂಧಗಳು ಯಾವುವು**?

**ಉ. :** 1) ಅಧಿಕಾರಿ, 2) ವಿಷಯ, 3) ಸಂಬಂಧ, 4) ಪ್ರಯೋಜನ

**1) ಅಧಿಕಾರಿ : ಅನಸೂಯವೇ –** ಅಸೂಯ ರಹಿತನಾದ ಅರ್ಜುನನೇ ಅಧಿಕಾರಿ.

ಅಸೂಯ ಇಲ್ಲದವನು ಅನಸೂಯ, ಆ ಕಾಲದಲ್ಲಿ ಅರ್ಜುನನು ಅಸೂಯ ರಹಿತನಾಗಿದ್ದ ದ್ರೌಪದಿಯನ್ನು ಸ್ವಯಂವರದಲ್ಲಿ ಗೆದ್ದವನು ಯಾರು? ಅರ್ಜುನನೆ, ತಾನು ಗೆದ್ದಿದ್ದ ದ್ರೌಪದಿಯನ್ನು ಐದು ಜನರು ಮದುವೆಯಾದರು. ಅವನಲ್ಲಿ ನಾನೇ ಗೆದ್ದಿದ್ದೇನೆಂದು, ನಾನೆ ಮದುವೆ ಮಾಡಿಕೊಳ್ಳಬೇಕೆಂಬ ದುರ್ಬುದ್ಧಿ ಇರಲಿಲ್ಲ. ಆದ್ದರಿಂದ ಅವನು ಅಸೂಯೆ ರಹಿತನು.

ಅಸೂಯವು ಒಂದು ದುಷ್ಟ ಗುಣ. ಆತ್ಮಜ್ಞಾನಕ್ಕಾಗಿ ಹುಟ್ಟಿರುವ ಮನುಷ್ಯನನ್ನು ಇದು ಅಧೋಗತಿಗೆ ತೆಗೆದುಕೊಂಡು ಹೋಗುತ್ತದೆ. ಇದು ಬರೀ ಅಧ್ಯಾತ್ಮ ಕ್ಷೇತ್ರದಲ್ಲಿ ಮನುಷ್ಯನಿಗೆ ವಿಘ್ನಕಾರಿಯಾಗಿರುವುದಲ್ಲದೇ ಸಂಸಾರದ ಎಲ್ಲಾ ಕ್ಷೇತ್ರದಲ್ಲಿಯೂ ಇದು ವಿಘ್ನಕಾರಿ, ಸಾಮಾಜಿಕದಲ್ಲಾಗಲಿ, ರಾಜಕೀಯದಲ್ಲಿಯಾಗಲಿ, ಸಾಹಿತ್ಯ ಕ್ಷೇತ್ರದಲ್ಲಿ–ಯಾಗಲಿ ಇದು ಇರಬಾರದು. ಅಸೂಯ ಇದ್ದವನು ಉನ್ನತಿಯನ್ನು ಪಡೆಯಲಾರನು. ಉದಾ.: ಒಂದು ಸಾರಿ ನಾರದರು ದುರ್ಯೋಧನನ ಮನೆಗೆ ಬಂದರು. ಆಗ ದುರ್ಯೋಧನನು ನಮಸ್ಕಾರ ಮಾಡಿ, ಸ್ವಾಮಿ ತಾವು ಎಲ್ಲಿಂದ ಬಂದಿರಿ ಎಂದು ಕೇಳಿದನು. ನಾರದರು ನಾನು ದ್ವಾರಕೆಯಿಂದ ಬಂದೆ ಎಂದರು. ಅಲ್ಲಿ ಆ ಕೃಷ್ಣನು ಏನು ಮಾಡುತ್ತಿದ್ದ ಎಂದು ಕೇಳಿದನು. ಮೊದಲೇ ಆ ಕೃಷ್ಣನ ಹೆಸರು ಕೇಳಿದರೆ





ದುರ್ಯೋಧನನಿಗೆ ಆಗದು. ಅಂಥದರಲ್ಲಿ ನಾರದರು, ಆ ಶ್ರೀಕೃಷ್ಣನು ಒಂದು ಬಲವಾದ ಆನೆಯನ್ನು ಒಂದು ಸಣ್ಣ ಸೂಜಿಯ ತೂತಿನಲ್ಲಿ ಆ ಕಡೆಯಿಂದ, ಈ ಕಡೆಗೆ, ಈ ಕಡೆಯಿಂದ ಆ ಕಡೆಗೆ ಓಡಾಡಿಸುತ್ತಾ ಇದ್ದನು ಎಂದರು. ಆಗ ಕರ್ಣ, ದುಶ್ಶಾಸನ ಕೌರವರನ ಮಕ್ಕಳು ಎಲ್ಲ ಗಹ ಗಹಿಸಿ ನಕ್ಕರು. ನಿಮ್ಮಂಥವರಿಂದಲೇ ಕೃಷ್ಣನನ್ನು ಮೇಲಕ್ಕೆ ತಂದಿರುವುದು ಎಂದು ಹಾಸ್ಯ ಮಾಡಿದರು.

ಪುನಃ ನಾರದರು ಅರಣ್ಯದಲ್ಲಿರುವ ಪಾಂಡವರ ವಾಸ ಸ್ಥಾನಕ್ಕೆ ಹೋದರು. ಪಾಂಡವರು ನಾರದರನ್ನು ಕಂಡು ಭಕ್ತಿಯಿಂದ ನಮಸ್ಕಾರ ಮಾಡಿದರ. ಸ್ವಾಮಿ ! ಎಲ್ಲಿಂದ ಬಂದಿರಿ? ನಾನು ದ್ವಾರಕೆಯಿಂದ ಬಂದೆ. ಹಾಗಾದರೆ ಭಗವಂತನಾದ ಶ್ರೀಕೃಷ್ಣ ಪರಮಾತ್ಮ ಏನನ್ನು ಮಾಡುತ್ತಿದ್ದನು? ಆಗ ನಾರದರು ಗಂಭೀರವಾಗಿ ಆ ನಮ್ಮ ಪರಮಾತ್ಮನು ಸಣ್ಣ ಸೂಜಿಯ ಕಣ್ಣಿನಲ್ಲಿ ಮಹತ್ತರವಾದ ದೊಡ್ಡದಾದ ಆನೆಯನ್ನು ಈ ಕಡೆಯಿಂದ, ಆ ಕಡೆ, ಆ ಕಡೆಯಿಂದ ಈ ಕಡೆಗೆ ಓಡಾಡಿಸುತ್ತಾ ಇದ್ದಾರೆಂದರು. ಆ ಘಟಿತ ಘಟನಾ ಸಾಮರ್ಥ್ಯ ಇರುವುದರಿಂದ ನಮ್ಮ ಪರಮಾತ್ಮನಿಗೆ ಅದೇನು ಮಹಾ ದೊಡ್ಡದು ಎಂದನು. ಎರಡೂ ಕಡೆಯ ಒಂದೇ ಮಾತು, ಕೌರವರಲ್ಲಿ ಏನು ಪರಿಣಾಮ ಮಾಡಿತು. ಪಾಂಡವರಲ್ಲಿ ಏನು ಪರಿಣಾಮ ಮಾಡಿತು. ಇದನ್ನೇ ಅಸೂಯೆ ಎಂದು ಕರೆಯುತ್ತಾರೆ. ಅದಕ್ಕಾಗಿ ಭಗವಂತನು ಈ ಶ್ಲೋಕದಲ್ಲಿ ಏನು ಇದ್ದರೆ ಇರಲಿ, ಆದರೆ ವೇದಾಂತಕ್ಕೆ ಪವಿತ್ರವಾದ ಅಂತಃಕರಣ ಇರಬೇಕೆಂದು ಅಸೂಯೆ ಇರಬಾರದು ಎಂದಿದ್ದಾನೆ.

ಇಂತಹ ಅಸೂಯೆಯನ್ನು ತಾಳಲಾರದೆ ಕೌರವರು ಭೀಮಸೇನನನ್ನು ಉಳಿಸಬಾರದೆಂದು ಅವನಿಗೆ ವಿಷವನ್ನು ಹಾಕಿದರು. ಅವನು ಮೂರ್ಚಿತನಾದಾಗ ಅವನನ್ನು ಕಲ್ಲು ಕಟ್ಟಿ ನದಿಯಲ್ಲಿ ಹಾಕಿದರು ಮತ್ತು ಅರಗಿನ ಮನೆಯಲ್ಲಿ ಬೆಂಕಿ ಹಾಕಿ ಸುಟ್ಟು ಹಾಕಿದರು. ಮೋಸದ ಜೂಜಿನಿಂದ ಆ ಪಾಂಡವರ ರಾಜ್ಯವನ್ನು ಕಿತ್ತುಕೊಂಡರು. ಪಗಡೆ ಆಟದಲ್ಲಿ ದ್ರೌಪದಿಯನ್ನು ಪಣಕ್ಕೆ ಇಟ್ಟು ಆಕೆಯನ್ನು ಗೆದ್ದುಕೊಂಡು, ಅಕೆಯನ್ನು ವಸ್ತ್ರಹೀನಳನ್ನಾಗಿ ಮಾಡಲು ಹೊರಟರು. ಹೀಗೆ ಭಾರತದಲ್ಲಿ ಕೌರವರ ಅಸೂಯೆಯೂ ಅಲ್ಪ ಸ್ವಲ್ಪವಾಗಿಲ್ಲ. ಹಾಗೆಯೇ ರಾಮಾಯಣದಲ್ಲಿಯೂ ಕೌಸಲ್ಯಯ ಮಗ ಶ್ರೀರಾಮನು ಚಕ್ರವರ್ತಿಯಾಗಿ ನನ್ನ ಮಗ ಭರತನು ಅವನ ಕೈ ಕೆಳಗೆ ಇರಬೇಕೆಂದು ಅಸೂಯೆಯಿಂದ 14 ವರ್ಷ ಶ್ರೀರಾಮ ವನವಾಸ ಮಾಡಬೇಕೆಂದು ನನ್ನ ಮಗ ಭರತನು ರಾಜ್ಯದ ಅಧಿಕಾರವನ್ನು ವಹಿಸಿಕೊಳ್ಳಬೇಕೆಂದು ಕೈಕೇಯಿ ಕೇಳಿದ್ದು ಅಸೂಯೆಯೇ ಅಲ್ಲವೇ. ಆದ್ದರಿಂದ ಈ ಅಸೂಯೆಯನ್ನು ಮೊದಲು ದೂರ ತಳ್ಳಬೇಕು. ಆಗಲೇ ಅಸೂಯಾರಹಿತ ವೇದಾಂತಕ್ಕೆ ಅಧಿಕಾರಿ.

**2) ವಿಷಯ : 'ಜ್ಞಾನಂ ವಿಜ್ಞಾನ ಸಹಿತಂ'** ಎಲ್ಲಿಯವರೆಗೆ ನಮ್ಮ ಜ್ಞಾನವು

ಪರೋಕ್ಷವಾಗಿರುತ್ತದೆಯೋ ನಮ್ಮ ಹೃದಯದಲ್ಲಿರುವ ಅಪರೋಕ್ಷವಾದ ಅಜ್ಞಾನವು ನಿವಾರಣೆ ಆಗುವುದಿಲ್ಲ. ಈ ಅಪರೋಕ್ಷ ಅಜ್ಞಾನವು ನಿವಾರಣೆಯಾಗಬೇಕಾದರೆ, ಅಪರೋಕ್ಷ ಅನುಭವ ಜ್ಞಾನವಾದಾಗ ಮಾತ್ರ ನಿವಾರಣೆ ಆಗುತ್ತದೆ.

**3) ಸಂಬಂಧ :** ಪ್ರವಕ್ಷ್ಯಾಮಿ ಅಂದರೆ ಒಂದು ಸಾರಿ ಹೇಳಿದ ಮೇಲೆ ಮತ್ತೊಂದು ಸಾರಿ ಹೇಳುವ ಪ್ರಸಂಗವು ಬರಬಾರದು. ಹಾಗೆ ಹೇಳುತ್ತೇನೆಂದು ಭಗವಂತನ ಮಾತಿನಲ್ಲಿ ಪ್ರವಕ್ಷ್ಯಾಮಿ ಎಂದು ಎಂದಿದ್ದಾನೆ.

**4) ಪ್ರಯೋಜನ : ಯಜ್ಞಾತ್ವಾಮೋಕ್ಷಸೇ ಶುಭಾತ್** – ಯಾವುದನ್ನು ತಿಳಿದುಕೊಂಡರೆ ಅಶುಭವಾದ ಸಂಸಾರದಿಂದ ದಾಟುತ್ತೀಯೋ ಅದೇ ಪ್ರಯೋಜನ. ಆದ್ದರಿಂದ ಈ ಶ್ಲೋಕವೇ ಒಂದು ಗುಹ್ಯತಮವಾದ ಉಪನಿಷತ್ತು ಆಗಿದೆ, ಇದಕ್ಕೆ ಫಲ ಶ್ರುತಿಯೂ ಇದೆ. ಈ ರೀತಿ ಒಂದು ಶ್ಲೋಕದಲ್ಲಿ ಒಂದು ಗ್ರಂಥಕ್ಕೆ ಇರಬೇಕಾದ ಸರ್ವ ಅವಯವಗಳು ಇದರಲ್ಲಿವೆ. ಆದ್ದರಿಂದ ಈ ಶ್ಲೋಕವನ್ನು ವಿಚಾರ ಮಾಡಿ ಧನ್ಯರಾಗೋಣ.

### ಓಂ ತತ್ಸತ್

## "ಕೈವಲ್ಯೋಪನಿಷತ್"

**– ಶ್ರೀ ಪದ್ಮಪಾದಚಾರ್ಯ, ಬೆಂಗಳೂರು**

ಹಿಂದಿನ ಸಂಚಿಕೆಯಲ್ಲಿ ಉಪನಿಷತ್‌ಗಳು ಯಾವುವು? ಅದರ ಅರ್ಥವೇನು? ಹಾಗೂ ಕೈವಲ್ಯೋಪನಿಷತ್ ಅಂದರೇನು? ಆ ಗ್ರಂಥದ ಅಧಿಕಾರಿ, ವಿಷಯ ಸಂಬಂಧ ಪ್ರಯೋಜನವನ್ನು ಹಾಗೂ ಈ ಉಪನಿಷತ್ತಿನ ಶಾಂತಿ ಮಂತ್ರವನ್ನು ತಿಳಿದಿದ್ದಾಯಿತು.

**ಕೈವಲ್ಯೋಪನಿಷತ್ತು ಎಂದರೇನು?**

ಕೈವಲ್ಯ ಎಂದರೆ ಕೇವಲೀ ಭಾವ. ಕೇವಲೀ ಭಾವ ಯಾವುದು? ಯಾವ ಕೇವಲೀ ಭಾವ? ಇದು ಯಾರ ಮತ್ತು ಯಾವ ಕೇವಲೀ ಭಾಗವಲ್ಲ. ಉಪನಿಷತ್ತುಗಳು ಸದಾ ಸರ್ವತ್ರ ನಮ್ಮ ಸುದ್ದಿಯನ್ನೇ ಹೇಳುತ್ತವೆಯೇ ವಿನಃ ಇದರಲ್ಲಿ ಹೇಳಿರುವುದು ಯಾರದೋ ಸುದ್ದಿ ಅಲ್ಲ, ಪೊಳ್ಳು ಭರವಸೆಯೂ ಅಲ್ಲ ; ಯಾವ ಕುರುಡು ನಂಬಿಕೆಗಳು ಇದರಲ್ಲಿ ಇಲ್ಲ ; ಅಂಧ ಶ್ರದ್ಧೆಯೂ ಅಲ್ಲ ; ಮೂಢ ಆಚರಣೆಯೂ ಅಲ್ಲ, ಯಾವ ಪುರಾಣವೂ ಅಲ್ಲ ; ಪುರಾಣ ಕಥೆಗಳೂ ಅಲ್ಲ, ಭಕ್ತನ ಕಥೆಯೂ ಅಲ್ಲ, ಅತ್ಯಂತ ತರ್ಕಬದ್ಧವಾಗಿ ನ್ಯಾಯ ಸಮ್ಮತವಾದ ವಿಶ್ಲೇಷಣೆ, ಪ್ರತ್ಯಕ್ಷಾದಿ ಪ್ರಮಾಣಗಳಿಂದ ನಾವು ಯಾವ ಪರಾತ್ಪರವನ್ನು ತಿಳಿಯಲಾರವೋ, ಯಾವುದು ಗೂಢವಾಗಿ, ರಹಸ್ಯವಾಗಿ ಅತಿಗಹನವಾಗಿರುವ ಆತ್ಮವಸ್ತುವೋ, ಯಾವುದು ಗುಹ್ಯತಮವಾದುದೋ ಆ ಪರಮಾತ್ಮನೇ ಪ್ರತ್ಯಗಾತ್ಮನೆಂದು ಅಪರೋಕ್ಷವಾಗಿ ತಿಳಿಸಿಕೊಟ್ಟು ಮಾನವನನ್ನು

**"ದುರ್ಲಭಂ ತ್ರಯಮೋ ವೈತದ್ದೈ ವಾನುಗ್ರಹ. ಹೇತುಕಮ್। ಮನುಷ್ಯತ್ವಂ ಮುಮುಕ್ಷತ್ವಂ ಮಹಾಪುರುಷ ಸಂಶ್ರಯಃ"** –ಭಗವಂತನ ಅನುಗ್ರಹಕ್ಕೆ ಕಾರಣೀಭೂತವಾದ ಈ ಮೂರು ಕಷ್ಟಸಾಧ್ಯವೇ ಮನುಷ್ಯ– ಜನ್ಮ, ಮೋಕ್ಷವನ್ನು ಪಡೆಯಬೇಕೆಂಬ ಇಚ್ಛೆ ಮತ್ತು ಮಹಾತ್ಮರ ಸಂಗ (ವಿವೇಕ ಚೂಡಾಮಣಿ)



ಮಾಧವನನ್ನಾಗಿಯೂ, ಜೀವನನ್ನು ಶಿವನನ್ನಾಗಿಯೂ ಮಾಡುವುದು ಯಾವುದೋ ; ಯಾವುದು ಸ್ವಂತ ಅನುಭವಕ್ಕೆ ಬರುತ್ತದೆಯೋ, ಯಾವುದು ತಾನೇ ಬ್ರಹ್ಮವೆಂದು ದಿಟ್ಟತನದಿಂದ ಸತ್ಯದರ್ಶನದ ಘೋಷಣೆ ಮಾಡುತ್ತದೆಯೋ ಅದೇ ಉಪನಿಷತ್ತು. ಈ ಉಪನಿಷತ್ತು ತಿಳಿಸಿಕೊಡುವ ಕೇವಲೀ ಭಾವ ಆ ಭಾವವನ್ನೇ ಈ ಉಪನಿಷತ್ತು ತಿಳಿಸಿಕೊಡುವುದರಿಂದ ಕೈವಲ್ಯೋಪನಿಷತ್ತು ಎಂದು ಹೆಸರು ಪಡೆದಿದೆ.

**1.** ಉಪನಿಷತ್ತಿನ ಋಷಿವರ್ಯರಿಗೆ ಈ ಪ್ರಾಪಂಚಿಕ ವಸ್ತುಗಳಿಂದ ಆಗಬೇಕಾದುದು ಏನೂ ಇಲ್ಲ. ನಮ್ಮ ಋಷಿಗಳು ಸಂಪೂರ್ಣ ತುಂಬು ತ್ಯಾಗ ಜೀವನವನ್ನೇ ಬಯಸುತ್ತಿದ್ದರು. **"ಅದ್ವೇಷ್ಟಾಸರ್ವಭೂತಾನಾಮ್ ಮೈತ್ರಃ ಕರುಣಯೇವಚ"** ಯಾವ ಪ್ರಾಣಿಯನ್ನು ದ್ವೇಷಿಸಬೇಡ, ಇಷ್ಟೇ ಸಾಲದು ಮೇಲೆ ಎಲ್ಲಾ ಪ್ರಾಣಿಗಳನ್ನು ಪ್ರೇಮಿಸಬೇಕು. ಜಡಭರತ ಜಿಂಕೆ ಒಂದನ್ನು ಪ್ರೇಮಿಸಿದ; ಬೇರೆ ಪ್ರಾಣಿಗಳನ್ನು ಪ್ರೇಮಿಸುತ್ತಿರಲಿಲ್ಲ. ಆದ್ದರಿಂದ ಜಿಂಕೆಯಾಗಿಯೇ ಹುಟ್ಟಿದ. ಇದು ವಿಶ್ವ ಪ್ರೇಮವಲ್ಲ, ಇದು ಸಂಕುಚಿತ ಪ್ರೇಮ ನಮ್ಮ ಋಷಿಗಳು ಹೀಗೆ ಸಂಕುಚಿತರಾಗಿರಲಿಲ್ಲ. ಅವರು ದೇಹವನ್ನು ನೋಡುತ್ತಿರಲಿಲ್ಲ. ದೇಹದ ಚೈತನ್ಯ ಆತ್ಮನ ಕಡೆಗೆ ಅವರ ಗುರಿ. ಆ ದೇಹದ ಚೈತನ್ಯ ಒಂದೊಂದು ದೇಹಕ್ಕೆ ಒಂದೊಂದು ಅಲ್ಲ. ಎಲ್ಲಾ ಪ್ರಾಣಿಗಳ ದೇಹದಲ್ಲಿರುವ ಆ ಚೈತನ್ಯ ಒಂದೇ ಒಂದು ಎಂದು ತಿಳಿಸಿಕೊಟ್ಟಿದ್ದಾರೆ. ಆ ಒಂದೆ ಒಂದು ಚೈತನ್ಯವೆ ಕೇವಲೀ ಭಾವ.

**2. ಜಾಗ್ರತ್ಸ್ವ ಸ್ವಪ್ನ ಸುಷುಪ್ತಿಷು ಸ್ಫುಟಿತರಾ ಯಾ ಸಂವಿದುಜ್ಜೃಂಭತೇ।**

ಅಂದರೆ ಯಾವುದು ಜಾಗ್ರತ್ – ಸ್ವಪ್ನ – ಸುಷುಪ್ತಿಯಲ್ಲಿ ಮೂರಾವಸ್ಥೆಯಲ್ಲಿ ಇದ್ದು ಮೂರಾವಸ್ಥೆಗೆ ಸಾಕ್ಷಿ ಆಗಿರುತ್ತದೆಯೋ ಅದೇ ಕೇವಲ.

**ಯಾ ಬ್ರಹ್ಮಾದಿ ಪಿಪೀಲಿಕಾಂತ ತನುಷು ಪ್ರೋತಾಜಗತ್ ಸಾಕ್ಷಿಣಿ।**

ಯಾವುದು ಬ್ರಹ್ಮನಿಂದ ಹಿಡಿದು ಇರುವೆವರೆಗೆ ಇರುವ ಎಲ್ಲ ದೇಹಗಳಲ್ಲಿ, ದಾರವು ಎಲ್ಲಾ ರುದ್ರಾಕ್ಷಿಗಳನ್ನು ಹೇಗೆ ಎಣಿದುಕೊಂಡಿದೆಯೋ ಹಾಗೆ, ಅದೇ **ಕೇವಲ** ಎಂದೂ, ಪ್ರಪಂಚದ ಸರ್ವ ದೃಶ್ಯ ಪದಾರ್ಥಗಳನ್ನು ನೋಡುವ ದ್ರಷ್ಟನೇ ನಾನು. ನನಗಿಂತ ಭಿನ್ನವಾದುದು ಯಾವುದೂ ಇಲ್ಲ ಎಂದು ಯಾವನಿಗೆ ದೃಢವಾದ ಪ್ರಜ್ಞೆ ಉಂಟಾಗಿದೆಯೋ ಆ ದ್ರಷ್ಟನೇ **ಕೇವಲ** ಎಂದು ಶಂಕರರು ಮನೀಷಾ ಪಂಚಕದಲ್ಲಿ ಹೇಳಿದ್ದಾರೆ.

**3. 'ಕೇವಲಸ್ಯ ಭಾವಂ ಕೈವಲ್ಯಂ'** ಕೇವಲ ಎಂದರೆ ಒಂದೇ ಆದುದು. ಇದನ್ನು ಛಾಂದೋಗ್ಯ ಉಪನಿಷುತ್ತು – **ಸದೇವ ಸೋಮ್ಯದಮಗ್ರಮಾಸೀತ್ ಏಕಂ, ಏವಂ ಅದ್ವಿತೀಯಂ ಬ್ರಹ್ಮ'** ಈ ಜಗತ್ತು ಹುಟ್ಟುವುದಕ್ಕಿಂತ ಮೊದಲು **'ಸತ್'** ಎಂದರೆ 'ಇದೆ',

**"ಕಿಂ ತೇನ ಅಶ್ರುತ ಪಾಪಂ ಚೌರೇಣಾತ್ಮಾಪ ಹಾರಿಣಃ"** –ಯಾವನು ತಾನು ಆತ್ಮನಾಗಿದ್ದರೂ, ತಾನು ಆತ್ಮನೆಂದು ತಿಳಯದೆ ಹೋದರೆ ಅವನು ಎಲ್ಲಾ ಪಾಪವನ್ನು ಮಾಡಿದಂತೆಯೂ, ಆತ್ಮನನ್ನು ಕಳ್ಳತನ ಮಾಡಿದಂತೆ ಆಗುವುದು (ಅಭಿಜ್ಞಾನ ಶಾಕುಂತಲೆ)

ಎಂಬ ವಸ್ತು ಇತ್ತು. ಇದು **ಏಕಂ ಏವಂ ಅದ್ವಿತೀಯಮ್** ಎಂದರೆ ಸ್ವಜಾತಿ ಭೇದವಿಲ್ಲದೆ ವಿಜಾತೀಯ ಭೇದವಿಲ್ಲದೆ, ಸ್ವಗತ ಭೇದವು ಯಾವುದು ಇಲ್ಲದೆ ಒಂದಾನೊಂದು ವಸ್ತು ಇತ್ತು ಅದೇ **ಕೇವಲ**ವಾದುದು.

**4**. ಇನ್ನು ಐತರೇಯೋಪನಿಷಿತ್ತು **"ಆತ್ಮಾ ವಾ ಇದಮೇಕ ಏವಗ್ರ ಆಸೀತ್ । ನಾನ್ಯತ್ ಕಿಂಚನ ಮಿಷತ್"** ಈ ದೃಶ್ಯ ರೂಪವಾದ ಜಗತ್ತು ಕಾಣುವುದಕ್ಕೆ ಮೊದಲು ಆತ್ಮನೊಬ್ಬನೇ ಆಗಿತ್ತು. ಅದಕ್ಕಿಂತ ಭಿನ್ನವಾದ ದೃಶ್ಯ ವಸ್ತುಗಳು ಯಾವುದೂ ಇರಲಿಲ್ಲ. ಆ ಆತ್ಮನೇ **ಕೇವಲ** ಎನಿಸಿಕೊಳ್ಳುತ್ತಾನೆ.

**5**. ಇನ್ನು ತೈತ್ತಿರೀಯ ಉಪನಿಷತ್ತು **"ಓಮಿತೀದಗ್ಂ ಸರ್ವಮ್"** ಈ ದೃಶ್ಯಮಾನವಾದ ಜಗತ್ತು ಕಾಣುವುದಕ್ಕಿಂತ ಮೊದಲು **'ಓಂ'** ಎಂಬ ಅಕ್ಷರ ಮಾತ್ರವೇ ಆಗಿತ್ತು. ಅದೇ **ಕೇವಲ**ವಾದುದೆಂದು ತೈತ್ತಿರೀಯ ಹೇಳುತ್ತದೆ.

**6**. **"ಓಂ ಪೂರ್ಣಮದಃ ಪೂರ್ಣಮಿದಮ್"** ಈ ದೃಶ್ಯ ರೂಪದಿಂದ ಕಾಣುವ ಜಗತ್ತಿಗಿಂತ ಮುಂಚೆ ಯಾವುದು ಪರಿಪೂರ್ಣವಾಗಿ ತನಗಿಂತ ಭಿನ್ನವಲ್ಲದ ವಸ್ತುವು ಇತ್ತೋ ಆ ಪರಿಪೂರ್ಣವಾದುದೇ **ಕೇವಲ**ವಾದುದು.

**7**. ಶ್ರೀಮನ್ನಿ ಜಗುಣರು **ಕೈವಲ್ಯ ಪದ್ಧತಿ** ಎಂಬ ಗ್ರಂಥವನ್ನೇ ರಚಿಸಿ ಅದರಲ್ಲಿ ಐದು ಭಾಗ ಮಾಡಿ 1) ಶಿವಕಾರುಣ್ಯ ಸ್ಥಳ, 2) ಜೀವ ಸಂಬೋಧನ ಸ್ಥಳ, 3) ನೀತಿ ಕ್ರಿಯಾಚಾರ ಸ್ಥಳ, 4) ಯೋಗ ಪ್ರತಿಪಾದನ ಸ್ಥಳ, 5) ಜ್ಞಾನ ಪ್ರತಿಪಾದನ ಸ್ಥಳ. ಈ ಐದೂ ಸ್ಥಳಗಳಿಂದ ನಮ್ಮ ಸ್ವರೂಪವನ್ನು ಕೇವಲ ಎಂದು ಸಾಧಿಸಿದ್ದಾರೆ. ಇದೇ **ಕೇವಲೀಭಾವ**.

**8**. ಈ **ಕೈವಲ್ಯ** ಎಂಬ ಪದಕ್ಕೆ ವಿದ್ಯಾರಣ್ಯ ಸ್ವಾಮಿಗಳು ತಮ್ಮ ವೇದಾಂತ ಪಂಚದಶಿಯಲ್ಲಿ **'ಪ್ರತ್ಯಕ್‌ತತ್ವ'** ಎಂದಿದ್ದಾರೆ. ಪ್ರತ್ಯೇಕಿಸಲ್ಪಟ್ಟ ತತ್ವ. ಮೂರು ದೇಹಗಳಿಂದ ಮೂರು ಅವಸ್ಥೆಗಳಿಂದ ಐದು ಕೋಶಗಳಿಂದ ಪ್ರತ್ಯೇಕಿಸಲ್ಪಟ್ಟ ಪದಾರ್ಥವೇ ಪ್ರತ್ಯಕ್ತತ್ವ ಇದೇ **ಕೇವಲೀಭಾವ** ಎಂದು ಹೇಳಿದ್ದಾರೆ.

**9**. ಶುದ್ಧ ಸತ್ತ್ವ ಮಾಯೆಯಲ್ಲಿ ಪ್ರತಿಬಿಂಬಿಸಿ ಈಶ್ವರನಾಗುವುದಕ್ಕೆ ಮುಂಚೆ ಯಾವ ತತ್ತ್ವವಿತ್ತೋ ಮಲಿನ ಸತ್ತ್ವ ಅವಿದ್ಯೆಯಲ್ಲಿ ಪ್ರತಿಬಿಂಬಿಸಿ ಜೀವನಾಗುವುದಕ್ಕಿಂತ ಯಾವ ತತ್ತ್ವವಿತ್ತೋ, ತಮಃ ಪ್ರಧಾನ ಪ್ರಕೃತಿಯಲ್ಲಿ ಪ್ರತಿಬಿಂಬಿಸಿ, ಜಗತ್ತಾಗುವುದಕ್ಕಿಂತ ಮುಂಚೆ ಯಾವ ಪದಾರ್ಥವಿತ್ತೋ ಅದೇ ಕೇವಲಭಾವ ಇದೇ **"ಕೇವಲ"** ಪದದ ಅರ್ಥ.

ಒಂದೇ ಒಂದು ವಸ್ತು ಇತ್ತು. ಅದು ಸತ್ ರೂಪದಲ್ಲಿತ್ತು. ಅದಕ್ಕೆ ದೇಹಾದಿಗಳು ಇಂದ್ರಿಯ ಅಂತಃಕರಣಾದಿಗಳು ಸೇರಿ ಜೀವವಾಯಿತು.

---

**"ಸರ್ವ ಸಂಕಲ್ಪ ಸಂನ್ಯಾಸೀ ಯೋಗಾರೂಢ ಸ್ತದೋಚ್ಯತೇ"**
ಯಾರು ಸರ್ವಸಂಕಲ್ಪ(ಕಾಮನೆ)ಗಳನ್ನು ತ್ಯಜಿಸಿದವನನ್ನು
ಯೋಗಾರೂಢನೆಂದು ಕರೆಯುತ್ತಾರೆ (ಗೀತೆ 6-4)



ಒಂದೇ ಒಂದು ವಸ್ತುವಿತ್ತು. ಅದಕ್ಕೆ ಶುದ್ಧ ಸತ್ತ್ವ ಮಾಯೆಯು ಸೇರಿ ಈಶ್ವರವಾಯಿತು. ಉಂಗುರ, ಚೈನು, ಬಳೆ ಆಗುವುದಕ್ಕೆ ಮುಂಚೆ ಒಂದೇ ಒಂದು ಬಂಗಾರವಿತ್ತು. ಗಡಿಗೆ, ಕುಡಿಕೆ, ದೀಪ ಆಗುವುದಕ್ಕಿಂತ ಮುಂಚೇ ಒಂದೇ ಒಂದು ಮಣ್ಣು ಇತ್ತು. ಹಾಗೆ ಈಶ್ವರ. ಜೀವ ಜಗತ್ತು ಆಗುವುದಕ್ಕಿಂತ ಮುಂಚೆ ಯಾವ ಸ್ಥಿತಿಯಲ್ಲಿತ್ತೋ ಅದೇ ಪರಬ್ರಹ್ಮ. ಅದು ಬರೀ ಚೈತನ್ಯವೇ. ಬರೀ ಚೈತನ್ಯ ಸಂಬಂಧವಾಗಿರುವುದರಿಂದ ಈ ಉಪನಿಷತ್ತು **ಕೈವಲ್ಯೋಪನಿಷತ್** ಆಯಿತು.

ಇಲ್ಲಿಯವರೆವಿಗೆ ಕೈವಲ್ಯೋಪನಿಷತ್ತಿನ ಹೆಸರನ್ನೂ ಸ್ಥಾನಮಾನವನ್ನು ತಿಳಿದೆವು. ಇನ್ನು ಈ ಉಪನಿಷತ್ತಿನ ಶಾಂತಿ ಮಂತ್ರವನ್ನು ತಿಳಿಯೋಣ.

**ಓಂ ಸಹ ನಾ ವವತು ! ಸಹ ನೌ ಭುನಕ್ತು ! ಸಹವೀರ್ಯಂಕರವಾವಹೈ ! ತೇಜಸ್ವಿನಾವಧೀತಮಸ್ತು ! ಮಾ ವಿದ್ವಿಷಾವಹೈ ! ಓಂಶಾಂತಿಃ ಶಾಂತಿಃ ಶಾಂತಿಃ**

ಓಂಕಾರ ವಾಚ್ಯನಾದ ಪರಮಾತ್ಮನೇ ಎಂದು ಓಂಕಾರಕ್ಕೆ ಅರ್ಥ. ಓಂ ಎನ್ನುವುದು ಪರಮಾತ್ಮನ ನಾಮವೂ ಹೌದು–ಪರಮಾತ್ಮನ ರೂಪವೂ ಹೌದು. ಇದನ್ನು ಪತಂಜಲಿ ಮಹಋಷಿಗಳು **"ತಸ್ಯವಾಚಕಃ ಪ್ರಣವಃ ತಜ್ಜಪ ತದರ್ಥ ಭಾವನಮ್"** ಎಂದಿದ್ದಾರೆ. ನಾಮವನ್ನು ಹಿಡಿದು ಕೂಗಿದರೆ ನಾಮವು ನಾಮಿಯನ್ನು ತಂದು ಎದುರಿಗೆ ನಿಲ್ಲಿಸುತ್ತದೆ. ರಾಮ ನಾಮವು ರಾಮನನ್ನು ತಂದು ಎದುರಿಗೆ ನಿಲ್ಲಿಸುತ್ತದೆ. ರಾಮಕೃಷ್ಣಾದಿಗಳು ಬರೀ ನಾಮಗಳು ಮಾತ್ರ, ರೂಪವು ಇಲ್ಲ. ಓಂಕಾರವನ್ನು ಜಪ ಮಾಡಬಹುದು. ಅದು ಮಂತ್ರವೋ ಹೌದು ರೂಪವೂ ಸಹ ಆಗಿದೆ. ಓಂಕಾರವು ಪರಮಾತ್ಮನ ಪೂರ್ಣ ಶಕ್ತಿಯನ್ನು ತಂದು ಎದುರಿಗೆ ನಿಲ್ಲಿಸುತ್ತದೆ. ಆದ್ದರಿಂದ ಸಪ್ತ ಕೋಟಿ ಮಹಾಮಂತ್ರಗಳಿಗೆ ಓಂಕಾರವೇ ಬೀಜ ; ಓಂಕಾರ ಇಲ್ಲದ್ದು ಮಂತ್ರವಾಗಲಾರದು. ಹೆಣವನ್ನು ಕೂಗಿ ಕರೆದಂತಾಗುತ್ತದೆ.

**ಪ್ರ.: ಓಂಕಾರಕ್ಕೆ ಇಷ್ಟು ಮಹತ್ವ ಇಷ್ಟು ಪೂಜ್ಯತೆ ಹೇಗೆ ಬಂತು**?

**ಉ.:** ಹಿಂದೆ ಚತುರ್ಮುಖ ಬ್ರಹ್ಮನು ಅಂದರೆ ಮೊದಲು ವೇದವು ಯಾರಿಗೆ ಉಪದೇಶವಾಯಿತೋ ಆ ಆದಿ ಪುರುಷನು ಜಗತ್ ಸೃಷ್ಟಿಗಾಗಿ ಅವ್ಯಕ್ತದಿಂದ ಹೊರಗೆ ಬಂದ. ಆಗ ಅವನ ಬಾಯಿಂದ ಅವನಿಗೆ ಗೊತ್ತಿಲ್ಲದೆ ಒಂದು ಮಂತ್ರ ಹೊರಗೆ ಬಂತು.

**ಓಂಕಾರ ಅಥ ಶಬ್ದಶ್ಚ ದ್ವಾವೇತೇ ಬ್ರಹ್ಮಣಃ ಪುರಾ ।**

**ಕಂಠಂಭಿತ್ವಾ ವಿನಿರ್ಯಾತೌ ತಸ್ಮಾನ್ಮಾಂಗಲಿಕಾ ಉಭೌ ॥**

---

**"ಆಚಾರ್ಯ ದೈವ ವಿದ್ಯಾ ವಿದಿತಾ ಸಾಧಿಷ್ಟಂ ಪ್ರಾಪ್ತಯತಿ"**
ಶ್ರೀ ಗುರುಗಳಿಂದ ಕಲಿತಂತಹ ವಿದ್ಯೆಯು ಮುಕ್ತಿಯನ್ನೇ ಕೊಡುತ್ತದೆ
(ಛಂದೋಗ್ಯ ಉ.)

ಈ ಮಂತ್ರ ಅದರಲ್ಲಿ **'ಓಂ'** ಮತ್ತು **'ಅಥ'** ಎಂಬ ಪದಗಳು ಅವನಿಗೆ ಗೊತ್ತಿಲ್ಲದೆ ಬಂದವು. ಆದ್ದರಿಂದ ಅವೆರಡೂ ಮಂಗಲ ಸೂಚಕವಾದ ಪದಗಳೆಂದು ಪ್ರಖ್ಯಾತಿ ಹೊಂದಿದೆ.

**ಪ್ರ. : ಆ ಚತುರ್ಮುಖ ಬ್ರಹ್ಮನಿಗೇಕೆ ಗೌರವ ಸ್ಥಾನ?**

**ಉ.:** ಅವನು ಅಸಂಗನಾಗಿ ಜಗತ್ ಸೃಷ್ಟಿ ಮಾಡಿದ. ನಾನು ಮಾಡಿದೆನು ಎಂಬ ಅಹಂಕಾರವೇ ಇಲ್ಲ. ಯಾರಿಗೆ ನಾನು ಈ ಕರ್ಮವನ್ನು ಮಾಡಿದೆನು ಎಂಬ ಅಹಂಕಾರ ಇರುವುದಿಲ್ಲವೋ ; ಅವನ ಬುದ್ಧಿಯು ಯಾವುದಕ್ಕೂ ಅಂಟಿಕೊಂಡಿಲ್ಲವೋ ಅವನು ಈ ಮೂರು ಲೋಕವನ್ನು ಸುಟ್ಟರೂ ಸುಟ್ಟಂತೆ ಅಲ್ಲ ಎಂದು ಗೀತೆಯ 18-17ರಲ್ಲಿ ಹೇಳಿದೆ.

**ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯನ ಲಿಪ್ಯತೇ ।**

**ಹತ್ವಾಪಿ ಸ ಇಮಾನ್‌ಲ್ಲೋಕಾನ್ ನ ಹಂತಿ ನ ನಿಬಧ್ಯತೇ ॥**

ಆ ಚತುರ್ಮುಖ ಬ್ರಹ್ಮನು ಅಸಂಗನಾಗಿ ಜಗತ್ತನ್ನು ಸೃಷ್ಟಿ ಮಾಡಿದ. ಆದ್ದರಿಂದ ಅವನಿಗೆ ಬಹಳ ಗೌರವ ಸ್ಥಾನ. ಅವನ ಬಾಯಿಂದ ಬಂದುದ್ದೇ ಮಹಾಮಂತ್ರ. ಅವನು **'ಓಂ'** ಮತ್ತು **'ಅಥ'** ಪದಗಳನ್ನು ಉಚ್ಚರಿಸಿ ಜಗತ್ ಸೃಷ್ಟಿ ಮಾಡಿದ. ಆದ್ದರಿಂದ ಜಗತ್ತು ಮಂಗಳಮಯವಾಗಿದೆ. ಆದ್ದರಿಂದ ಭಗವದ್ಗೀತೆಯು **"ಓಂ ತತ್ಸತ್ ಇತಿ ನಿರ್ದೇಶೋ"** ಎಂದು ನಾವು ಏನನ್ನಾದರೂ ಮಾಡುವಾಗ ಓಂಕಾರವನ್ನು ಉಚ್ಚರಿಸಿಯೇ ಪ್ರಾರಂಭ ಮಾಡಬೇಕೆಂದು ಹೇಳುತ್ತದೆ.

ಈ ಉಪನಿಷತ್ತಿನ ಶಾಂತಿ ಮಂತ್ರದ ಅರ್ಥವನ್ನು ತಿಳಿಯೋಣ.

**1) ಓಂ**ಕಾರ ವಾಚ್ಯನಾದ ಪರಮಾತ್ಮನೇ **"ಸಹನಾವವತು" ನೌ** = ನಮ್ಮಿಬ್ಬರನ್ನು ಎಂದರೆ ಗುರು ಶಿಷ್ಯರಾದ ನಮ್ಮನ್ನು, ಗಂಡ ಹೆಂಡತಿಯರಾದ ನಮ್ಮನ್ನು, ಶ್ರೀಮಂತ ಬಡವನಾದ ನಮ್ಮಿಬ್ಬರನ್ನು **ಸಹ** = ಒಟ್ಟಿಗೆ ಒಂದೇ ರೀತಿಯಲ್ಲಿ **ಅವತು** = ರಕ್ಷಿಸಲಿ.

ಆದ್ದರಿಂದ 'ನಮ್ಮಿಬ್ಬರನ್ನು ಸಮವಾಗಿರಿಸಲಿ' ಎಂಬ ಬೇಡಿಕೆಯು ಸಮಂಜಸವೂ ಕ್ರಮಬದ್ಧವೂ ಆಗಿದೆ. ಏಕೆಂದರೆ ವಿಷಮತ್ವವು ಎಲ್ಲಿ ಇದೆಯೋ ಅಲ್ಲಿ ದುಃಖ ತಪ್ಪಿದ್ದಲ್ಲ. ಸಮತ್ವದಲ್ಲಿ ದುಃಖವಿಲ್ಲ. ಬಾವಿಯಲ್ಲಿ ಒಂದು ಕೊಡ ನೀರನ್ನು ತುಂಬಿಕೊಂಡರೆ ನೀರು ಕೂಡಲೇ ಖಾಲಿಯಾದ ಸ್ಥಳವನ್ನು ಆ ಕಡೆ, ಈ ಕಡೆಯಿಂದ ನೀರಿನಿಂದ ಭರ್ತಿ ಮಾಡುತ್ತದೆ. ನೀರು ವಿಷಮತ್ವವನ್ನು ಸಹಿಸುವುದಿಲ್ಲ.

ಈ ವಿಷಮತ್ವದ ನಿವಾರಣೆಗಾಗಿ ನಮ್ಮ ವೇದದಲ್ಲಿ ಋಷಿಗಳು ಐದು ಬೇಡಿಕೆಯನ್ನು ಇಟ್ಟಿದ್ದಾರೆ. ಮೊದಲು ಸಹನಾವವತು.

**2) ಸಹ ನೌ ಭುನಕ್ತು : ನೌ** = ನಮ್ಮಿಬ್ಬರನ್ನು, **ಸಹ** = ಸೇರಿಸಿ ಜೊತೆಯಲ್ಲಿ, **ಭುನಕ್ತು** = ಭೋಗ ಪದಾರ್ಥಗಳನ್ನು ಕೊಡುವಂತಾಗಲಿ. ಸಮಾಜದಲ್ಲಿ ವಿಷಮತ್ವವು ಇರಬಾರದು.

---

**"ಚಿತ್ತಸ್ಯ ಶುದ್ಧಯೇ ಕರ್ಮ ನತು ವಸ್ತೂಪಲಬ್ಧಯೇ ಸ್ತು ಸಿದ್ಧಿರ್ವಿಚಾರೇಣ ನ ಕಿಮಚಿತ್ ಕರ್ಮಕೋಟಿಭಿಃ"**
ಕರ್ಮವು ಚಿತ್ತಶುದ್ಧಿಗಾಗಿ ಮಾತ್ರ ಇದೆ. ಆದರೆ ಪರಬ್ರಹ್ಮನ ಸಾಕ್ಷಾತ್ಕಾರ ಹೊಂದುವುದಕ್ಕೆ ಅಲ್ಲ. ಪರಬ್ರಹ್ಮನ ಸಾಕ್ಷಾತ್ಕಾರವು ವಿಚಾರದಿಂದ ಮಾತ್ರ ಉಂಟಾಗುವುದೆ ವಿನಃ, ಕೋಟಿ ಕರ್ಮಗಳಿಂದಲೂ ಆಗುವುದಿಲ್ಲ
(ವಿವೇಕ ಚೂಡಾಮಣಿ)



ನಾನು ಬೇರೆ, ನೀನೇ ಬೇರೆ ಎಂದು ಸಮಾಜ ತುಂಡು ತುಂಡಾಗಿದೆ. ಹೆಚ್ಚಾಗಿ ತಿಂದು ಜೀರ್ಣಿಸಿಕೊಳ್ಳಲು ಔಷಧಿ ತೆಗೆದುಕೊಳ್ಳುವವರು ಕೆಲವರು ; ಹೊಟ್ಟೆಗೆ ಅನ್ನವಿಲ್ಲದೆ ನಿಶ್ಯಕ್ತರಾಗಿ ದುರ್ಬಲರಾಗಿ ಸಾಯುತ್ತಿರುವವರು. ಕೆಲವರು, ಹೀಗೆ ವಿಷಮತೆಯಿರುವಾಗ ಸಮಾಜದಲ್ಲಿ ಹೇಗೆ ಶಾಂತಿಯು ನೆಲಸೀತು ! ಹಿಂದೆ ಋಷಿಗಳ ಕಾಲದಲ್ಲಿ ಈ ವಿಷಮತೆಯಿರಲಿಲ್ಲ. **"ಸರ್ವೇಜನಾಃ ಸುಖಿನೋ ಭವಂತು"** ಎಂಬ ವಿಶಾಲ ಭಾವನೆ ಅವರಲ್ಲಿ ಇತ್ತು. ಈ ವಿಷಮತೆಯನ್ನು ನಿವಾರಣೆ ಮಾಡಲು ಈ ಪ್ರಾರ್ಥನೆ ಸಿದ್ಧೌಷಧಿ. ನಾನು ಏನೇನನ್ನು ಭೋಗಿಸುತ್ತೇನೆಯೋ ಇನ್ನೊಬ್ಬನೂ ಅದನ್ನೇ ಭೋಗಿಸಲಿ.

ಹಿಂದೆ ಆಂಧ್ರದ ಅರ್ಲಗಡ್ಡ ಶಂಕರಾನಂದಾಶ್ರಮದಲ್ಲಿ ಓಬಯ್ಯ ಶೆಟ್ಟರು ಎಂಬ ಒಬ್ಬ ಭಕ್ತರಿದ್ದರು. ಈಗ ಚಳಿ, ಕೋಟನ್ನು ಹಾಕಿಕೊಳ್ಳಿರಿ ಎಂದರೆ ಒಂದು ಕೋಟಿಗೆ (ಆ ಕಾಲದಲ್ಲಿ) 20 ರೂ. ಆಗುತ್ತದೆ. ಆ 20 ರೂ. ಅನ್ನು ಹೊಟ್ಟೆಗೆ ಇಲ್ಲದವರಿಗೆ ಊಟ ಹಾಕಿದರೆ 60-70 ಜನ ಊಟ ಮಾಡಿ ಸಂತೋಷ ಪಡುತ್ತಾರೆ ಎನ್ನುತ್ತಿದ್ದರು. ನಮಗಿಂತ ಹೆಚ್ಚಿನ ದೃಷ್ಟಿ ಬೇರೆಯವರಿಗೆ ಕೊಡಬೇಕು. ಅದಕ್ಕಾಗಿ **"ಸಹ ನೌ ಭುನಕ್ತು"** ಎಂಬ ಪ್ರಾರ್ಥನೆಯು ಸಮಂಜಸವು ಕ್ರೀಯಾಶೀಲವೂ ಆಗಿದೆ. ಓಂಕಾರ ವಾಚ್ಯನಾದ ಪರಮೇಶ್ವರಾ ನಮ್ಮಿಬ್ಬರನ್ನು ಸಮನಾಗಿ ಪೋಷಿಸು, ನಮ್ಮಿಬ್ಬರಿಗೂ ಸಮಾನವಾದ ಭೋಗ್ಯ ಪದಾರ್ಥಗಳನ್ನು ಅನುಗ್ರಹಿಸು.

**3) "ಸಹವೀರ್ಯಂ ಕರವಾವಹೈ"** ನಮ್ಮಿಬ್ಬರಿಗೂ ಜೊತೆಯಲ್ಲಿ ಸಾಮರ್ಥ್ಯವನ್ನು ಉಂಟು ಮಾಡುವಂತಾಗಲಿ. ಜಗತ್ತಿನಲ್ಲಿ ಶಕ್ತನೇ ಬಾಳುವುದು, ಅಶಕ್ತನು ತುಳಿಯಲ್ಪಡುತ್ತಾನೆ. ಪ್ರಪಂಚದಲ್ಲಿ ಶಕ್ತಿಹೀನ ಪದಾರ್ಥಗಳು ಬಾಳಲು ಅವಕಾಶವೆ ಇಲ್ಲ. ಶಕ್ತಿಯು ವೀರ್ಯವು ಈಶ್ವರನ ವಸ್ತು. ಇದು ಅವನ ಸ್ವತ್ತು. ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿ, ದ್ರಾವ್ಯಶಕ್ತಿ, ಅಧ್ಯಾತ್ಮಶಕ್ತಿ ಇತ್ಯಾದಿ ಶಕ್ತಿಗಳೆಲ್ಲಾ ಈಶ್ವರನ ಶಕ್ತಿಗಳು. ಈ ಸೃಷ್ಟಿಯ ಸ್ವತ್ತಾದ ಈ ಎಲ್ಲಾ ಶಕ್ತಿಗಳು ಸರ್ವರಿಗೂ ಸಂಬಂಧಪಟ್ಟಿವೆ. ಎಲ್ಲರಿಗೂ ಬೋಧಿಸಲು ಅವಕಾಶವಿದೆ. ಸೂರ್ಯನ ಉಷ್ಣತೆಯನ್ನು ಹಾಗೂ ಬೆಳಕನ್ನು ಬೋಧಿಸಲು ಯಾರಿಗೂ ಹಕ್ಕಿಲ್ಲವೇ? ಶೂದ್ರನಿಗೆ ಅಧಿಕಾರ ಇಲ್ಲವೇ? ಸೂರ್ಯನಿಗೆ ಶೂದ್ರ-ಬ್ರಾಹ್ಮಣ ಎಂಬ ಭೇದವಿದೆಯೇ? ನೀನು ನನ್ನ ಬೆಳಕಿಗೆ ಅನಧಿಕಾರಿ ಎನ್ನುತ್ತಾನೆಯೇ? ಎಂದೂ ಇಲ್ಲ. ಹಾಗೆ ಈಶ್ವರನ ಸ್ವತ್ತಿಗೆ ಎಲ್ಲರಿಗೂ ಅಧಿಕಾರವಿದೆ. ಆದ್ದರಿಂದ, ಹೇ ದಯಾಮಯನಾದ ಭಗವಂತನೇ ನಮ್ಮೆಲ್ಲರಿಗೂ ಸಮಾನವಾದ ವೀರ್ಯವನ್ನು (ಸಾಮರ್ಥ್ಯ) ದಯಪಾಲಿಸು. ನನ್ನಂತೆ ಒಂದು ಇರುವೆಯೂ ಬಾಳಲಿ, ಈಶ್ವರನ ದೃಷ್ಟಿಯಲ್ಲಿ ನಾನು ಮತ್ತು ಇರುವೆ ಸಮಾನರು. ಇಬ್ಬರೂ ಜೀವರೆ ಅದಕ್ಕಾಗಿ ಸಮಾನವಾದ ಶಕ್ತಿ ಸಾಮರ್ಥ್ಯವನ್ನು ದಯಪಾಲಿಸು.

---

**"ಜಾತಸ್ಯ ಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತಸ್ಯಚ"**
ಹುಟ್ಟಿದವನಿಗೆ ಸಾವು ನಿಶ್ಚಯ, ಸತ್ತವನಿಗೆ ಮತ್ತೆ ಹುಟ್ಟುವುದು ನಿಶ್ಚಯ
(ಗೀತೆ 2-23)

ಸರ್ವರೂ ಅಧ್ಯಾತ್ಮಿಕ ವಿದ್ಯೆಯನ್ನು ಆಚರಣೆಯಲ್ಲಿ ಇಟ್ಟುಕೊಳ್ಳುವ ವೀರ್ಯವನ್ನು ಸಂಪಾದಿಸುವಂತಾಗಲಿ. ಗುರುಶಿಷ್ಯರು ತಾವು ಕಲಿತ ಸತ್ ಶಾಸ್ತ್ರಗಳಿಂದ ಅಧ್ಯಾತ್ಮ ಶಕ್ತಿಯನ್ನು ಬಲಪಡಿಸಿಕೊಂಡು ಲೋಕದ ಮಾನವರಿಗೆ ಒಳ್ಳೆಯ ಆಧ್ಯಾತ್ಮಿಕ ಕಲೆಗಳನ್ನು ಉಪದೇಶ ಮಾಡಲಿ. ರಾಜ ಪ್ರಜೆಗಳು ತೇಜೋವಂತರಾಗಿ ಬಾಳಿ ರಾಷ್ಟ್ರದ ಅಭ್ಯುದಯಕ್ಕೆ ಸಾಧಕರಾಗಲಿ! ಸತಿ ಪತಿಗಳು ಆದರ್ಶವಂತರಾಗಿ ಬಾಳಲಿ! ಲೋಕಕ್ಕೆ ಸತ್ ಸಂತಾನವನ್ನು ಕೊಡುವಂತಾಗಲಿ.

**4) ತೇಜಸ್ವಿನಾವಧೀತ ಮಸ್ತು : ನೌ ಅಧೀತಂ ತೇಜಸ್ವೀ ಅಸ್ತು** – ನಾವು ಇಬ್ಬರೂ ಸಂಪಾದಿಸಿರುವ ಅಧ್ಯಯನವು ತೇಜಸ್ವಿಯಾಗಲಿ. ನಾವು ಯಾವ ವಿದ್ಯೆಯನ್ನು ಶ್ರವಣ ಮಾಡುತ್ತೇವೆಯೋ ಅದು ತೇಜಸ್ವಿಯಾಗಲಿ. ಅಂದರೆ ಆ ವಿದ್ಯೆಯು ಬರೀ ಬಾಯಲ್ಲಿ ಹೇಳಿದಂತೆ ಆಚರಣೆಯಲ್ಲಿ ಬರಲಿ; ನಾವು ಅಧ್ಯಯನ ಮಾಡಿದ ವಿದ್ಯೆಯು ಆಚರಣೆಯಲ್ಲಿ ಬರದೆ ಬರೀ ಹೇಳಿಕೆಯಲ್ಲಿದ್ದರೆ ಅಂತಹ ವಿದ್ಯೆಯಿಂದ ಪ್ರಯೋಜನವೇನು?

ಬಹಳ ಮಾಡಿ ಸ್ವಲ್ಪ ಹೇಳುವವನು ಉತ್ತಮ ; ಮಾಡಿದಷ್ಟು ಹೇಳುವವನು ಮಧ್ಯಮ ಹೇಳಿದಷ್ಟು ಮಾಡದವನು ಅಧಮ. ಹೇಳಿ ಮಾಡದವನು ಅಧಮಾಧಮ. ಆದ್ದರಿಂದ ನಾವಿಬ್ಬರೂ ಅಧ್ಯಯನ ಮಾಡಿದ ವಿದ್ಯೆಯು ಕಾರ್ಯ ರೂಪಕ್ಕೆ ಬರಲಿ! ವ್ಯವಹಾರಕ್ಕೆ ಬರಲಿ.

**5) ಮಾವಿದ್ವಿಷಾವಹೈ :** ಹಿಂದಿನ ನಾಲ್ಕು ಅಲ್ಪಸ್ವಲ್ಪ ಆಚರಣೆಗೆ ಬಂದರೂ ಸಾಕು. ಆದರೆ ಈ ಐದನೇ ತತ್ತ್ವವು ಬಹಳ ಮುಖ್ಯ. ನಾವಿಬ್ಬರೂ ಯಾವಾಗಲು ದ್ವೇಷ ಮಾಡದಂತಾಗಲಿ, ದ್ವೇಷವು ಮೊದಲು ತನ್ನನ್ನು ಸುಟ್ಟು, ನಂತರ ಮತ್ತೊಬ್ಬರನ್ನು ಸುಡುತ್ತದೆ. ದ್ವೇಷ ಎಂದರೆ ದ್ವಿ+ವಿಷ. ಇದು ಎಲ್ಲಾ ರಂಗದಲ್ಲಿಯೂ ಕೆಟ್ಟದ್ದೆ. ಇದು ಎಲ್ಲಿ ಹುಟ್ಟುತ್ತದೆಯೋ ಅಲ್ಲಿ ಮೊದಲು ಸುಡುತ್ತದೆ. ದ್ವೇಷವಿದ್ದ ಮನುಷ್ಯ ಸದಾ ಚುಚ್ಚು ಮಾತಾಡುತ್ತಾನೆ. ಹೇ ಪರಮಾತ್ಮ ನನ್ನ ಗುರು ಹೇಗೆ ಬೈದರೂ ಅದನ್ನು ಸಹಿಸುವ ಶಕ್ತಿಯನ್ನು ಕೊಡು. ಪ್ರಸಂಗ ಬಂದರೆ ನಾನು ಬೆಕ್ಕಿನ ಮರಿ ಆಗುತ್ತೇನೆ. ನನ್ನ ಗುರು ಬೆಕ್ಕಾಗಲಿ, ಅವರು ಮಂಗವಾಗಲಿ, ಹಾಗೇ ನಾನು ಮಂಗನ ಮರಿಯಾಗಿ ಅಂಟಿಕೊಳ್ಳುತ್ತೇನೆ.

**ಉದಾ.:** ಒಬ್ಬ ಸಾಧುಗಳಲ್ಲಿ ಒಬ್ಬ ಮನುಷ್ಯನು ಗುರುಪದೇಶ ಪಡೆದ. ಮಾಂಸಮಯ ಶರೀರವು ಮಂತ್ರಮಯವಾಗುವುದೇ ಮೊದಲಿನ ಮೆಟ್ಟಿಲು. ಜ್ಞಾನಮಯವಾಗುವುದು

**''ಕರ್ಮಣ್ಯೇ ವಾಧಿಕಾರಸ್ತೇ ಮಾಫಲೇಷು ಕದಾಚನಃ''**
ಕರ್ಮ ಮಾಡುವುದರಲ್ಲಿಯೇ ನಿನಗೆ ಅಧಿಕಾರ ಇದೆ.
ಆದರೆ ಕರ್ಮಫಲದಲ್ಲಿ ಯಾವಾಗಲೂ ಅಧಿಕಾರವಿಲ್ಲ (ಗೀತೆ 2-43)



ಎರಡನೇ ಮೆಟ್ಟಿಲು. ಇವೇ ಶ್ರೀಗುರುವಿನ ವಚನ ಉಪದೇಶಗಳು. ಆ ಶಿಷ್ಯನ ಪ್ರಾರಬ್ಧ ಕರ್ಮ ಮುಗಿಯಿತು, ಸತ್ತು ಹೋದ. ಗುರುವಿಗೆ ಅಣಿಮಾದಿ ಸಿದ್ಧಿಗಳು ಗೊತ್ತಿತ್ತು, ಅವನು ಎಲ್ಲಿ ಹುಟ್ಟಿದ್ದಾನೆಂದು ನೋಡಿದರು. ಅವನು ಒಬ್ಬ ದರಿದ್ರನ ಮನೆಯಲ್ಲಿ ಹುಟ್ಟಿದ್ದ. ಗುರುಗಳು ಅಲ್ಲಿಗೆ ಹೋದರು. ಅವನು ದಿನವೂ ಕಾಡಿಗೆ ಹೋಗಿ ಕಟ್ಟಿಗೆ ಕಡಿದು ಕತ್ತೆಯ ಮೇಲೆ ಹೇರಿಕೊಂಡು ಬಂದು ಪಟ್ಟಣದಲ್ಲಿ ಮಾರಿ ಜೀವಿಸಬೇಕಾಗಿತ್ತು. ತಂದೆ ತಾಯಿಗೂ ಅನ್ನ ಹಾಕಬೇಕಾಗಿತ್ತು. ಅವನು ದಿನವೂ ಕಾಡಿಗೆ ಓಡಾಡುವ ದಾರಿಯಲ್ಲಿಯೇ ಒಂದು ಕುಟೀರ ಹಾಕಿಕೊಂಡು ದಿನವೂ ಆ ಹುಡುಗನನ್ನು ಮಾತಾಡಿಸುತ್ತಾ, ಅವನಿಗೆ ನೀರು ಬಿಸ್ಕತ್ತು ಕೊಡುತ್ತ ಬಂದರು. ಗುರುಶಿಷ್ಯರಿಗೆ ಆತ್ಮ ಸಂಬಂಧವೆ ವಿನಃ, ದೇಹ ಸಂಬಂಧವಿಲ್ಲ. ಗಂಡ ಹೆಂಡತಿ ಸಂಬಂಧ ದೇಹ ಸಂಬಂಧ. ಗುರು ಶಿಷ್ಯರ ಸಂಬಂಧ ಆತ್ಮ ಸಂಬಂಧ. ಇಂತಹ ಆತ್ಮ ಸಂಬಂಧವಿರುವ ಗುರು ಶಿಷ್ಯರಲ್ಲಿ ದ್ವೇಷ ಉಂಟಾದರೆ ಗತಿ ಏನು? ಆ ಶಿಷ್ಯನ ಗತಿ ಏನು?

ಆ ಹುಡುಗನನ್ನು ಈ ಸ್ವಾಮಿಗಳು ತನ್ನವನನ್ನಾಗಿ ಮಾಡಿಕೊಂಡರು. ಅವನಿಗೆ ಹೇಳಿದರು. ಸಾಯಂಕಾಲ ಕಟ್ಟಿಗೆ ತಂದು ಮಾರಿ ಅವನಲ್ಲಿದ್ದ, ಆ ಕತ್ತೆ, ಆ ಹಗ್ಗ, ಆ ಕೊಡಲಿಯನ್ನು ದಾನ ಕೊಡು ಎಂದರು. ಅವನು ಹಾಗೆ ಮಾಡಿದ. ಬೆಳಿಗ್ಗೆ ಆ ಕತ್ತೆ, ಹಗ್ಗ, ಕೊಡಲಿ ತಯಾರಾಗಿದ್ದವು. ಈ ದಿನವೂ ಕಟ್ಟಿಗೆ ಕಡಿದು ತಂದು ಮಾರು, ಜೀವಿಸು, ಅವನ್ನು ದಾನ ಕೊಡು. ಹೀಗೇ ಅವನು ಮಾಡಿದ. 20 ದಿನವಾಯಿತು. ಬ್ರಹ್ಮನೇ ಓಡಿ ಬಂದ. ಆ ಗುರುಗಳು ಹೇಳಿದರು. ಆ ಹುಡುಗನಿಗೆ ಬರೆದ ಪ್ರಾರಬ್ದವನ್ನು ಅಳಿಸು ಎಂದರು, ಅಳಿಸಿದ ಬ್ರಹ್ಮ. ಗುರುಗಳು ಅವನಿಗೆ ಸರ್ವ ದುಃಖ ನಿವೃತ್ತಿ ಪರಮಾನಂದ ಪ್ರಾಪ್ತಿ ರೂಪವಾದ ಮೋಕ್ಷವನ್ನೇ ದಯಪಾಲಿಸಿದರು.

ಇಂತಹ ಆತ್ಮ ಸಂಬಂಧವಾದ ಗುರು ಶಿಷ್ಯರಲ್ಲಿ ದ್ವೇಷ ಬಂದರೆ ಅವನು ನರಕಯತನೆ ಅನುಭವಿಸುತ್ತಾನೆ. ಜ್ಞಾನೇಶ್ವರಿ ಅವರು ಹೀಗೆ ಹೇಳುತ್ತಾರೆ. ನಾನು ಸತ್ತರೆ ಈ ನನ್ನ ದೇಹವನ್ನು ಭೂಮಿಯಲ್ಲಿ ಹೂಳುತ್ತಾರೆ. ನನ್ನ ಗುರು ಅದರ ಮೇಲೆ ಓಡಾಡಿ ಆ ಕಣ ಅವರ ಪಾದಕ್ಕೆ ಅಂಟಿದರೆ ನಾನು ಪಾವನವಾಗುತ್ತೇನೆ. ಆ ವಾಯುವನ್ನು ನನ್ನ ಗುರು ಸೇವಿಸಿ ಮೂಗಿನ ಮೂಲಕ ಒಳ ಸೇರಿ ನಾನು ಪವಿತ್ರನಾಗುತ್ತೇನೆ ಎನ್ನುತ್ತಿದ್ದರು. ಇದೇ ಶಾಂತಿ ಮಂತ್ರ. ಇದನ್ನು ಪಠಿಸಿ ಕೊನೆಯಲ್ಲಿ ಓಂ ಶಾಂತಿಃ ಶಾಂತಿಃ ಶಾಂತಿಃ ಎಂದು ಮೂರು ಸಾರಿ ಶಾಂತಿಯನ್ನು ಉಚ್ಚರಿಸಬೇಕು. ಹೀಗೆ

ಇದನ್ನು ಉಚ್ಚರಿಸಿದರೆ ಪುನರುಕ್ತಿ ದೋಷ ಬರುವುದಿಲ್ಲವೆ?

**''ಯೋಗ ಕರ್ಮಸು ಕೌಶಲಮ್''**
ಕುಶಲತೆಯಿಂದ ಕರ್ಮ ಮಾಡಿದರೆ ಅದೇ ಕರ್ಮವು ಯೋಗವಾಗುತ್ತದೆ
(ಗೀತೆ 2-50)

ದುಃಖಗಳು 3 ವಿಧ **– 1) ಆಧ್ಯಾತ್ಮಿಕ, 2) ಆಧಿಭೌತಿಕ, 3) ಆಧಿ ದೈವಿಕ** ದುಃಖಗಳು ನಿವಾರಣೆ ಆಗಲಿ. 1) ದಯಾನಂದ ಸರಸ್ವತಿಗಳು ಮೂರು ವೇದಗಳನ್ನು ಕಂಠಪಾಠ ಮಾಡಿದವರು. 1878ರಲ್ಲಿ ಆರ್ಯ ಸಮಾಜ ಸ್ಥಾಪಕರು – ಅಶಾಂತಿಯು ವ್ಯಕ್ತಿಯಲ್ಲಿ, ಸಮಾಜದಲ್ಲಿ, ದೇಶದಲ್ಲಿದೆ. ಅದು ನಿವಾರಣೆಯಾಗಲಿ ಎಂದು ಅರ್ಥ ಮಾಡಿದ್ದಾರೆ.

2) ಓಂ ಶಾಂತಿಃ ಶಾಂತಿಃ ಪುನಃ ಶಾಂತಿಃ ದೋಷತ್ರಯ ನಿವೃತ್ತಯೆ. ಶರೀರವಾಣಿ – ಮನಸ್ಸಿನಿಂದ ಕಂಡಾಗಲೀ ಕಾಣದೆ ಆಗಲೀ ಮಾಡಿದ ಪಾಪಗಳೆಲ್ಲ ನಿವಾರಣೆ ಆಗಲೀ ಎಂದು ಅರ್ಥ.

3) ಜಿಜ್ಞಾಸುಗಳ ಅಂತಃಕರಣದಲ್ಲಿರುವ ಮಲ, ವಿಕ್ಷೇಪ, ಆವರಣ ನಿವಾರಣೆ ಆಗಿ ನಿತ್ಯ ಸುಖ ಶಾಂತಿಯನ್ನು ಅನುಭವಿಸಿ ಪರಂಧಾಮವನ್ನು ಪಡೆಯುವಂತಾಗಲಿ.

4) ಇದನ್ನು ಸೂತ ಸಂಹಿತೆಯಲ್ಲಿ **ಶಾಂತಿಃ ಶಾಂತಿಃ ಶಾಂತಿಃ** ದೋಷತ್ರಯ ನಿವೃತ್ತಯೇ! **ಕೃತ್ವೈವ ಪ್ರಾರ್ಥನಾ ಮಾತ್ಮಾ ಜ್ಞಾನಾರ್ಥ ಪುನರಾಸ್ತಿಕಾ** ಎಂದು ಹೇಳಿದೆ. ಆದ್ದರಿಂದ ಆತ್ಮಜ್ಞಾನವೇ ಪರಮ ಪುರುಷಾರ್ಥ. ಅದು ಸಂಪಾದನೆಯಾಗಲಿ.

5) ಶ್ರೀಮದ್ಭಗವದ್ಗೀತೆಯ 2ನೇ ಅಧ್ಯಾಯ ಸ್ಥಿತಪ್ರಜ್ಞಾ ಲಕ್ಷಣದಲ್ಲಿ

**ನಾಸ್ತಿ ಬುದ್ಧಿರಯುಕ್ತಸ್ಯ ನಚಾಯುಕ್ತಸ್ಯ ಭಾವನಾ ।**

**ನಚ ಭಾವಯತಃ ಶಾಂತಿರಶಾಂತಸ್ಯಕುತಸ್ಸುಖಮ್ ॥**

ಜಿತೇಂದ್ರಿಯತ್ವವಿಲ್ಲದವನಿಗೆ ಸ್ಥಿರ ಬುದ್ಧಿಯಿರುವುದಿಲ್ಲ. ಸ್ಥಿರ ಬುದ್ಧಿ ಇಲ್ಲದವನಿಗೆ ಸ್ಥಿರ ಭಾವನೆಯಿರುವುದಿಲ್ಲ. ಸ್ಥಿರ ಭಾವನೆಯಿಲ್ಲದವನಿಗೆ ಶಾಂತಿಯು ಇರುವುದಿಲ್ಲ. ಶಾಂತಿ ಇಲ್ಲದವನಿಗೆ ಸುಖವು ಎಲ್ಲಿಂದ ಬರುತ್ತದೆ? ಆದ್ದರಿಂದ ಶಾಂತಿ ಸುಖಗಳು ಇಂದ್ರಿಯ ಬುದ್ಧಿ ಸಂಯಮಿಗಳಿಗೆ ದೊರಕುತ್ತವೆ ಎಂದು ಹೇಳಿದೆ.

ಆದ್ದರಿಂದ ಶಾಂತಿ ಪಾಠವು ಮೂರು ಸಾರಿ ಉಚ್ಚಾರ ಮಾಡಿ ದೊಡ್ಡದಾದ ವಿಶಾಲ ಭಾವನೆಯಿಂದ ತಾನು ಪರಬ್ರಹ್ಮವೇ ಎಂಬ ಶಾಂತಿಯು ಸರ್ವರಿಗೂ ದೊರೆಯಲಿ ಎಂದೇ ಮೂರು ಸಾರಿ ಶಾಂತಿಯನ್ನು ಉಚ್ಚಾರ ಮಾಡಬೇಕು.

[**ಮುಂದುವರಿಯುವುದು**]

**ಓಂ ಶಾಂತಿಃ ಶಾಂತಿಃ ಶಾಂತಿಃ**

---

**"ತತ್ಪರಂ ಪುರುಷ ಖ್ಯಾತೇ ಗುಣವೈ ತೃಷ್ಣಮ್"**

ಈ ದೇಹ ಇಂದ್ರಿಯಗಳು, ಮನಸ್ಸು, ಅಂತಃಕರಣ ಇವು ನಾನಲ್ಲ, ನನ್ನವೂ ಅಲ್ಲ. ನಾನು ಇವುಗಳಿಂದ ಬೇರೆ ಎಂಬ ವಿವೇಕ ಉಂಟಾಗಬೇಕು. (ಯೋಗ ದರ್ಶನ)



**ಓಂ ನಮೋ ಭಗವತೇ ವಾಸುದೇವಾಯ**

## ಶ್ರೀಕೃಷ್ಣಾಷ್ಟಮಿ ಪ್ರಯುಕ್ತ ವಿಶೇಷ ಲೇಖನ

# – : ಶ್ರೀಕೃಷ್ಣನ ಜನ್ಮರಹಸ್ಯ : –

– ಶ್ರೀಮತಿ ಉಮಾ ಮುರಳೀಧರ್, ಬೆಂಗಳೂರು

**ಕೃಷ್ಣಾಯ ವಾಸುದೇವಾಯ ದೇವಕೀನಂದನಾಯ ಚ ।**

**ನಂದಗೋಪಕುಮಾರಾಯ ಗೋವಿಂದಾಯ ನಮೋ ನಮಃ ॥**

ಶ್ರಾವಣ ಬಹುಳ ಅಷ್ಟಮಿ ರೋಹಿಣಿ ನಕ್ಷತ್ರ ಶ್ರೀಕೃಷ್ಣ ಪರಮಾತ್ಮನ ಅವತಾರ. ಇಡೀ ಭರತ ಖಂಡ..... ಶ್ರೀಕೃಷ್ಣ ಜಯಂತಿ ಎಂದೂ ಕೃಷ್ಣಾಷ್ಟಮಿ ಎಂದೂ, ಗೋಕುಲಾಷ್ಟಮಿ ; ಮನ್ನಾರ್ ಶ್ರೀಕೃಷ್ಣ ಜಯಂತಿ ಎಂದು ಹಬ್ಬವನ್ನು ಆಚರಿಸುತ್ತಾರೆ. ಶ್ರೀಕೃಷ್ಣ ಅವತಾರ ಪೂರ್ಣಾವತಾರ. ಶ್ರೀಕೃಷ್ಣನು ಸಾಕ್ಷಾತ್ ಭಗವಂತನು. ಷಡ್ಗುಣೈಶ್ವರ್ಯ ಸಂಪನ್ನನ್ನೇ ಭಗವಂತನು.

**ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಸಃ ಶ್ರಿಯಃ ।**

**ಜ್ಞಾನ ವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀರಣಾ ॥**

ಅಂದರೆ ಸಮಗ್ರವಾದ ಐಶ್ವರ್ಯ ; ಸಮಗ್ರವಾದ ವೀರ್ಯ (ಶಕ್ತಿ), ಸಮಗ್ರವಾದ ಯಶಸ್ಸು, ಸಮಗ್ರವಾದ ಶ್ರೀ, ಸಮಗ್ರವಾದ ಜ್ಞಾನ, ಸಮಗ್ರವಾದ ವೈರಾಗ್ಯ ಈ ಆರು ಉಳ್ಳವನೇ ಭಗವಂತನು ಮತ್ತು

**ಉತ್ಪತ್ತಿಂ ಚ ವಿನಾಶಂ ಚ ಭೂತಾನಾಮಾಗತಿಂ ಗತಿಮ್ ।**

**ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ ॥**

ಭೂತಗಳ ಉತ್ಪತ್ತಿ, ವಿನಾಶ, ಗತಾಗತಿ, ವಿದ್ಯಾ ಮತ್ತು ಅವಿದ್ಯೆಗಳನ್ನು ಪೂರ್ಣವಾಗಿ ತಿಳಿದಿರುವ ಸರ್ವಜ್ಞಮೂರ್ತಿಯೇ ಭಗವಂತ ಎಂದೂ ಭಗವಾನ್ ಎಂಬುದಕ್ಕೆ ಲಕ್ಷಣವನ್ನು ಹೇಳುವುದುಂಟು. ಅಂತಹ ಭಗವಂತನ ಅವತಾರ ಇದೇ ಶ್ರಾವಣ ಕಷ್ಣಾಷ್ಟಮಿ ದಿವಸ ಕಾರಾಗೃಹದಲ್ಲಿ ಅದರಲ್ಲಿಯೂ ಬುಧವಾರ ಆಯಿತೆಂದು ಹೇಳುತ್ತಾರೆ.

**ಪ್ರ. : ಕಾರಾಗೃಹದಲ್ಲಿ ಅವತಾರವಾಗಲು ಕಾರಣವೇನು?**

**ಉ. :** ಯದುವಂಶದ ಉಗ್ರಸೇನನು ಮಥುರೆಯ ಅರಸು, ಉಗ್ರಸೇನನ ರಾಣಿ ಒಮ್ಮೆ ಸ್ನಾನಾರ್ಥವಾಗಿ ಯಮುನಾ ನದಿಯಲ್ಲಿ ಹೋಗಿದ್ದಾಗ ಕಾಮಪರವಶಳಾಗಿ ತನ್ನ ಪತಿಯನ್ನು ಸ್ಮರಿಸಿದಳು. ಅದೇ ಅವಕಾಶ ಕಾಯುತ್ತಿದ್ದ ದ್ರುಮಿಲನೆಂಬ ರಾಕ್ಷಸನು ಉಗ್ರಸೇನನ ರೂಪಿನಿಂದ ಆಕೆಯನ್ನು ಕೂಡಿದ. ಕೆಲವು ಕುರುಹುಗಳಿಂದ ಇವನು ನನ್ನ ಗಂಡನಲ್ಲವೆಂದು ತಿಳಿದು ರೋಷ ಭರದಿಂದ "ನಿನ್ನ ದುರ್ಬಿಜದಿಂದ ಹುಟ್ಟಿದವನು

---

**"ಯನ್ಮನಸಾನುಮನತೆ ಯೇ ನಾರ್ಹು ಮನೋಮತಮ್"**

ಯಾವುದು ಮನಸ್ಸಿನಿಂದ ಮನನ ಮಾಡಲು ಆಗುವುದಿಲ್ಲವೋ, ಯಾವುದು ಮನಸ್ಸಿಗೆ ಮನನ ಮಾಡುವ ಶಕ್ತಿ ಕೊಟ್ಟಿರುವುದೋ ಅದೇ ಪರಮಾತ್ಮ (ಕೇನ.ಉ.)

ಯದುವಂಶದವರಿಂದಲೇ ನಾಶವಾಗಲೀ'' ಎಂದು ಶಾಪ ಕೊಟ್ಟಳು. ಆ ದುರ್ಬೀಜವೇ ಕಂಸ. ಇವನು ಕಾಲನೇಮಿಯ ಅಂಶದಿಂದ ಹುಟ್ಟಿದ್ದರಿಂದ ರಾಕ್ಷಸ ಗುಣಗಳು ಬಂದವು. ಪ್ರಾರಂಭದಲ್ಲಿಯೇ ಉಗ್ರಸೇನನನ್ನು ಸೆರೆಯಲ್ಲಿಟ್ಟು ತಾನೇ ರಾಜನಾದನು. ತನ್ನ ಚಿಕ್ಕಪ್ಪನ ಮಗಳಾದ ದೇವಕಿಯನ್ನು ವಸುದೇವನಿಗೆ ಕೊಟ್ಟು ವೈಭವದಿಂದ ಮದುವೆ ಮಾಡಿದ, ಇವಳ ಗರ್ಭದ ಶಿಶುವು ನಿನ್ನನ್ನು ಕೊಲ್ಲುವುದೆಂದು ಅಶರೀರವಾಣಿ ಆಯಿತು. ಆದ್ದರಿಂದ ವಸುದೇವ ದೇವಕಿಯರನ್ನು ಸರೆಯಲ್ಲಿಟ್ಟನು. ಆಕೆಯ ಹುಟ್ಟಿದ 7 ಮಕ್ಕಳನ್ನು ಕಂಸ ಕೊಂದು ಹಾಕಿದನು. ಎಂಟನೇ ಗರ್ಭವೇ ಶ್ರೀಕೃಷ್ಣನ ಜನನ. ಅದು ಸೆರೆಮನೆಯಲ್ಲಿ, ಆದ್ದರಿಂದ ಸೆರೆಮನೆಯಲ್ಲಿ ರಾತ್ರಿ 12 ಗಂಟೆಗೆ ಹುಟ್ಟಿದ. ಕೃಷ್ಣನ ಪ್ರೇರಣೆಯಂತೆ ನಂದಗೋಕುಲದಲ್ಲಿಯ ನಂದನ ಪತ್ನಿ ಯಶೋಧೆಯ ಬಳಿ ಬಿಟ್ಟರು. ತುಂಬಿ ಹರಿಯುವ ಯಮುನಾ ನದಿ ಎರಡು ಭಾಗವಾಯಿತು. ಭಗವಂತನಿಗೆ ದಾರಿ ಮಾಡಿಕೊಟ್ಟಿತು. ಕತ್ತಲಾಗಿದ್ದ ಆ ಕಾರಾಗೃಹ ಬೆಳಕಾಯಿತು. ವಸುದೇವ ದೇವಕಿಯರಿಗೆ ತೊಡಿಸಿದ ಸರಪಳಿಗಳು ತಾನಾಗಿ ಬಿಚ್ಚಿದವು. ಕಾವಲುಗಾರರು ನಿದ್ರಾಪರವಶರಾದರು. ಇಂತಹ ಕಾಲದಲ್ಲಿ ಶ್ರೀಕೃಷ್ಣನು ನಂದಗೋಕುಲಕ್ಕೆ ಪ್ರಯಾಣ ಮಾಡಿದನು.

ಈ ಕಾಲದಲ್ಲಿ ನಂದಗೋಕುಲದಲ್ಲಿಯೂ ಎಲ್ಲರಿಗೂ ಯೋಗ ಮಾಯೆ, ಎಲ್ಲರೂ ನಿದ್ರಿಸುತ್ತಿದ್ದರು. ಯಶೋಧೆಯು ನಿದ್ರಿಸುತ್ತಿದ್ದಾಳೆ. ಒಂದು ಹೆಣ್ಣು ಮಗು ಪಕ್ಕದಲ್ಲಿದೆ. ಆ ಹೆಣ್ಣು ಮಗುವನ್ನು ಎತ್ತಿಕೊಂಡು ಈ ತನ್ನ, ಬಾಲಕನನ್ನು, ಯಶೋಧೆಯ ಪಕ್ಕದಲ್ಲಿ ಹಾಕಿ ಬಂದಿದ್ದ ವಸುದೇವ ಎಲ್ಲವೂ ಬಹು ಚಮತ್ಕಾರವಾಗಿ ಆಶ್ಚರ್ಯಕರವಾಗಿ ನಡೆದು ಹೋದವು. ಇದೇ ದೇವಕಿ ಮಗು ಎಂದು ಕಂಸ ಆ ಮಗುವನ್ನು ತೂರಿ ತನ್ನ ಕತ್ತಿಯನ್ನು ಎತ್ತಿದ್ದಾನೆ. ಆ ಮಗು ಕೆಳಗೆ ಬೀಳಲಿಲ್ಲ. "ನಿನ್ನನ್ನು ಕೊಲ್ಲಲು ಮಗು ನಂದಗೋಕುಲದಲ್ಲಿ ಬೆಳೆಯುತ್ತಾ ಇದೆ'' ಎಂದು ಹೇಳಿ ಮಾಯವಾಯಿತು. ಇದರಿಂದ ಕಂಸನ ಕೋಪ, ತಾಪ, ಭಯ ಜಾಸ್ತಿ ಆಯಿತು. ಆಗಾಗ್ಗೆ ಕಂಪಿಸುತ್ತಿದ್ದ ಸಂಸಾರವೆಲ್ಲವೂ ಅವನಿಗೆ ವಿಷ್ಣುವಾಗಿ ಕಾಣುತ್ತಿದೆ. ಅವನಿಗೆ ಹಸಿವು ಆಗುತ್ತಿಲ್ಲ, ಬಾಯಾರಿಕೆ ಇಲ್ಲ. ಒಂದು ಕ್ಷಣ ನಿದ್ದೆ ಮಾಡುತ್ತಿಲ್ಲ. ಕಂಸನಿಗೆ ಪಶ್ಚಾತ್ತಾಪವಾಯಿತು. ವ್ಯರ್ಥವಾಗಿ ತನ್ನ ತಂಗಿ ಮಕ್ಕಳನ್ನು ಕೊಂದೆ ಎಂದುಕೊಂಡ. ಆ ಮಗುವಿನ ವಾಣಿಯಿಂದ ಅವನಿಗೆ ನೆಮ್ಮದಿಯೆ ಇಲ್ಲದಂತೆ ಆಯಿತು.

ಅದಕ್ಕಾಗಿ ಕಂಸನು ವ್ರಜ ದೇಶದಲ್ಲಿ 10 ದಿವಸದ ಅಸುಪಾಸು ಇರುವ ನವಜಾತ ಮಕ್ಕಳನ್ನು ಕೊಲ್ಲಲು ಕಳಿಸಿದ. ಅವರಲ್ಲಿ ಪೂತನಿಯೇ ಬಹಳ ಮುಖ್ಯ ಪ್ರಧಾನಳು ಮತ್ತು ಅಧ್ಯಕ್ಷಳು. ಈ ರಾಕ್ಷಸಿಯ ಇಚ್ಛಾನುಸಾರ ರೂಪ ಹೊಂದಿ ನವಜಾತ ಶಿಶುಗಳನ್ನು ಹತ್ಯೆ

''**ಸಹನಂ ಸರ್ವ ದುಃಖಾನಾಂ ಅಪ್ರತಿಕಾರ ಪೂರ್ವಕಂ ಚಿಂತಾ ವಿಲಾಪ ರಹಿತಂ ಸಾ ತಿತಕ್ಷಾನಿಗದ್ಯತೇ**''–ಯಾರು ಬರುವ ದುಃಖಗಳನ್ನು ಪ್ರತೀಕಾರ ಮಾಡದೆ ಸಹಿಸುತ್ತಾರೆಯೋ ಮತ್ತು ಚಿಂತೆ ಮಾಡದೆ ಸಹಿಸುತ್ತಾರೋ ಅದೇ ತಿತೀಕ್ಷೆ (ವಿವೇಕ ಚೂಡಾಮಣಿ)



ಮಾಡಬೇಕೆಂದು ಕಂಸನ ಆಜ್ಞೆ ಆಯಿತು. ಆ ದಿವಸಕ್ಕೆ ಶ್ರೀಕೃಷ್ಣನಿಗೆ 5ನೇ ದಿವಸ. ಈ ವಿಷಯ ಗೋಕುಲದಲ್ಲಿ ಗೊತ್ತಾಗಿ ಹಗಲು ರಾತ್ರಿ ಕಾಯುತ್ತಿದ್ದಾಗ ಸುಂದರ ಸ್ತ್ರೀ ವೇಷದಲ್ಲಿ ವ್ರಜ ದೇಶಕ್ಕೆ ಪೂತನಿಯು ಬಂದಳು. ಸಾಕ್ಷಾತ್ ಲಕ್ಷ್ಮಿಯಂತೆ ಇದ್ದುದರಿಂದ ಯಾರಿಗೂ ಅನುಮಾನ ಬರಲಿಲ್ಲ. ರೋಹಿಣಿ ಮತ್ತು ಯಶೋಧೆಯು ರಾಕ್ಷಸಿಯ ಕೃತ್ತಿಮ ವೇಷಕ್ಕೆ ಅಗಾಧವಾದ ಸೌಂದರ್ಯಕ್ಕೆ ಪ್ರಭಾವಾನ್ವಿತರಾದರು. ಯಾರು ಆ ಪೂತನಿಯನ್ನು ತಡೆಯಲಿಲ್ಲ. ತನ್ನ ತೊಡೆಯ ಮೇಲೆ ಶ್ರೀಕೃಷ್ಣನನ್ನು ಮಲಗಿಸಿಕೊಂಡು ಬಾಯೊಳಗೆ ತನ್ನ ವಿಷ ಪೂರ್ಣ ಸ್ತನವನ್ನು ಇಟ್ಟಳು. ಶ್ರೀಕೃಷ್ಣ ತನ್ನ ಎರಡೂ ಕೈಗಳಿಂದ ಅವಳ ಸ್ತನಗಳನ್ನು ಬಿಗಿಯಾಗಿ ಹಿಡಿದು ಹಾಲನ್ನು ಕುಡಿದ – ರಕ್ತವನ್ನು ಕುಡಿದ ಆಕೆಯು ಚೀರಿದಳು, ಅತ್ತಳು, ಒದ್ದಾಡಿದಳು, ಬಿಡಲೇ ಇಲ್ಲ. ಅಲ್ಲಿಂದ ಆಕೆ ಗೋಕುಲದಿಂದ ತನ್ನ ಮೊದಲ ರಾಕ್ಷಸ ರೂಪಿನಲ್ಲಿ ಹೋಗಿ ಸತ್ತು ಬಿದ್ದಳು.

**ಪೂತನಾ ಲೋಕಬಾಲಾಘ್ನಿ ರಾಕ್ಷಸೀ ರುಧೀರಾಶನ ।**

**ಜಿಘಾಂಸಯಾಪಿ ಹರಯೇ ಸ್ತನಂ ದತ್ವಾಪ ಸದ್ಗತಿಮ್ ॥**

ಪೂತನಿಯು ನಿರಪರಾಧ ಶಿಶು ಹತ್ಯಾ ಮಾಡಿದ ಶಿಶುಘಾತಕಿ, ರಾಕ್ಷಸಿ ಮತ್ತು ಶಿಶುರಕ್ತವೇ ಅವಳ ಆಹಾರ, ಊರ್ವಶಿಯು ಕುಬೇರನ ಪ್ರೇಯಸಿಯಾಗಿದ್ದಳು. ತುಂಬರನೆನ್ನುವ ಗಂಧರ್ವ ಅವಳನ್ನು ಒಲಿಸಿಕೊಂಡನು, ಮೋಸ ಮಾಡಿದವನಿಗೆ ರಾಕ್ಷಸಿ ಜನ್ಮ ಬರಬೇಕೆಂದು ಶಾಪ ಕೊಟ್ಟನು. ಕುಬೇರ, ಅದರಿಂದ ತಾಟಕಿಯಾದಳು, ಶ್ರೀರಾಮನಿಂದ ಹತವಾದಳು. ಆ ಸೇಡು ತೀರಿಸಿಕೊಳ್ಳಲು ಪೂತನಿಯಾಗಿ ಹುಟ್ಟಿ ಕಂಸನನ್ನು ತನ್ನ ಮಗನೆಂದು ಸಾಕಿದಳು. ಶ್ರೀಕೃಷ್ಣ ಪವಿತ್ರವಾದ ಮುಖ ಅವರ ಸ್ತನ ಮುಟ್ಟಿದ್ದರಿಂದ ಪವಿತ್ರಳಾದಳು. ಆಕೆ ಶರೀರವೆಲ್ಲಾ ಸುಗಂಧವಾಯಿತು. ಅವಳಿಗೆ ಸದ್ಗತಿ ಆಯಿತು.

**ಓಂ ತತ್ಸತ್**

ನಮೋ ಭಗವತೇ ಶಂಕರಾನಂದಾಯ

## – : ನಿರ್ವಾಣ ಷಟ್ಕ : –

**– ಶ್ರೀಮತಿ ಮಾತ ನಾಗರತ್ನಮ್ಮ, ಬೆಂಗಳೂರು**

ಶಂಕರ ಭಗವತ್ಪಾದಾಚಾರ್ಯರು ಮಾನವರ ಕಲ್ಯಾಣಕ್ಕಾಗಿ ಉಪನಿಷತ್, ಭಗವದ್ಗೀತಾ ಮತ್ತು ಬ್ರಹ್ಮಸೂತ್ರಗಳಿಗೆ, ಭಾಷ್ಯಗಳನ್ನೂ ಬರೆದರು, ಅನೇಕ ಪ್ರಕರಣ

''**ದೇಹಾತ್ಮ ಬುದ್ಧಿ ಜಂ ವಿದ್ಧಿ ನತದ್ಗೋವಧ ಕೋಟಿಭಿ ಬ್ರಹ್ಮಾತ್ಮ ಬುದ್ಧಿ ಜಂ ವಿದ್ಧಿ ನ ಭೂತೋ ನಭವಿಷ್ಯತೇ**''
ಒಂದು ಸಾರಿ ನಾನು ದೇಹವೆಂದರೆ ಒಂದು ಕೋಟಿ ಗೋವುಗಳನ್ನು ಕೊಂದ ಪಾಪ ಬರುತ್ತದೆಒಂದು ಸಾರಿ ನಾನು ಬ್ರಹ್ಮವೆಂದರೆ ಹಿಂದೆ ಮಾಡಿದ ಮುಂದೆ ಮಾಡಲಿರುವ ಎಲ್ಲಾ ಪಾಪಗಳು ನಿವಾರಣೆಯಾಗುತ್ತವೆ.

ಗ್ರಂಥಗಳನ್ನು ನಿರ್ಮಿಸಿದರು, ಅಷ್ಟೇ ಅಲ್ಲ ಅನೇಕ ಸ್ತೋತ್ರಗಳನ್ನು ಬರೆದಿದ್ದಾರೆ. ಎಲ್ಲೆಲ್ಲಿಯೂ ಸಹ ಅಧ್ಯಾತ್ಮವನ್ನು ತುಂಬಿದ್ದಾರೆ. ಅದರಲ್ಲಿ ನಿರ್ವಾಣ ಷಟ್ಕ ಎನ್ನುವುದೂ ಒಂದು. **"ನಿರ್ವಾಣ"** ಎನ್ನುವ ಪದಕ್ಕೆ ಅನೇಕ ಅರ್ಥಗಳಿದ್ದರೂ, ಅವುಗಳನ್ನು ನಿರ್ವಾಣ ಎಂದರೆ ಮೋಕ್ಷವೆಂದೇ ಗ್ರಹಿಸಬೇಕು. ಇಲ್ಲವೇ ಬ್ರಹ್ಮಾನಂದ, ಆತ್ಮಾನಂದ ಎಂದರೂ ಒಂದೇ. ಈ ನಿರ್ವಾಣ ಷಟ್ಕ ಎಂಬ ಸ್ತೋತ್ರದಲ್ಲಿ 6 ಶ್ಲೋಕಗಳಿವೆ. ಅದರೆ ತುಂಬೆಲ್ಲಾ ವೇದಾಂತವೇ ಅಚ್ಚುಕಟ್ಟಾಗಿ ತುಂಬಿದೆ.

**ಮನೋಬುಧ್ಯ ಅಹಂಕಾರ ಚಿತ್ತಾನಿ ನಾಹಂ**

**ನಚ ಶ್ರೋತ್ರ ಜೀಹ್ವೇ ನಚಘ್ರಾಣ ನೇತ್ರೇ ।**

**ನ ಚ ವ್ಯೂಮ ಭೂಮಿನ್ ತೇಜೋ ನವಾಯು**

**ಚಿದಾನಂದ ರೂಪಃ । ಶಿವೋಽಹಂ ಶಿವೋಽಹಂ ॥**

**ಅರ್ಥ :**

ಮೋಕ್ಷ ಸಾಮ್ರಾಜ್ಯವನ್ನು ಮುಟ್ಟಿಸುವುದೇ ಶಂಕರರ ಮೂಲ ಉದ್ದೇಶ. ಮನುಷ್ಯನಿಗೆ ಮೂರು ಶರೀರಗಳು, ಈ ಶರೀರಗಳು ಸ್ಥೂಲ, ಸೂಕ್ಷ್ಮ, ಕಾರಣ, ಈ ಶರೀರಗಳು ನಾನೆಂದೂ ಮನುಷ್ಯ ತಪ್ಪಾಗಿ ತಿಳಿದು ದೇಹದಲ್ಲಿ ಅಧ್ಯಾಸ ಹೊಂದಿದ್ದಾನೆ. ಶಂಕರರು ಆ ಅಧ್ಯಾಸವನ್ನು ಬಿಡಿಸುವುದಕ್ಕಾಗಿ ಈ 6 ಶ್ಲೋಕಗಳನ್ನು ಬರೆದಿದ್ದಾರೆ. ಮೊದಲನೇ ಶ್ಲೋಕದಲ್ಲಿ ಸೂಕ್ಷ್ಮ ಶರೀರದ ಅಧ್ಯಾಸ ಬಿಡಿಸಿದ್ದಾರೆ.

ಈ ಸೂಕ್ಷ್ಮ ಶರೀರದಲ್ಲಿ ಸೂಕ್ಷ್ಮ ಶರೀರವು ಸೂಕ್ಷ್ಮ ಪಂಚಭೂತಗಳಿಂದ ತಯಾರಾಗಿರುವುದರಿಂದ ಇದನ್ನು ಸೂಕ್ಷ್ಮ ಶರೀರ ಎಂದು ಕರೆಯಲಾಗಿದೆ. ಈ ಸೂಕ್ಷ್ಮ ಪಂಚಭೂತಗಳನ್ನು ಅಪಂಚೀಕೃತ ಪಂಚಭೂತಗಳೆಂದೂ ಕರೆಯುತ್ತಾರೆ. ಇದರಲ್ಲಿರುವ ಸಾಮಾಗ್ರಿಗಳು "ಮನಸ್ಸು ಬುದ್ಧಿ, ಚಿತ್ತ ಮತ್ತು ಅಹಂಕಾರ" ಇವು ಆ ಸೂಕ್ಷ್ಮ ಪಂಚಮಹಾಭೂತಗಳ ಸಮಷ್ಟಿ ಸತ್ವಗುಣದಿಂದ ಮಾಡಲ್ಪಟ್ಟಿದೆ. ಆದ್ದರಿಂದ ಇವು ನಾನಲ್ಲ ಮತ್ತು ನನ್ನವೂ ಅಲ್ಲ ಮತ್ತು ಈ ಮನಸ್ಸು ಬುದ್ಧಿ ಚಿತ್ತ ಅಹಂಕಾರಗಳು ನನಗೆ ಕಾಣುವುದರಿಂದ ಅವು ದೃಶ್ಯ ಪದಾರ್ಥಗಳು ನಾನು ಅವುಗಳನ್ನು ನೋಡುವ ದ್ರಷ್ಟ ಮತ್ತು ಅವು ಒಂದು ಕಾಲದಲ್ಲಿದ್ದು ಮತ್ತೊಂದು ಕಾಲದಲ್ಲಿ ಇರುವುದಿಲ್ಲ. ನಾನು ಇಲ್ಲದ ಸುಷುಪ್ತಿಯಲ್ಲಿ ಇದ್ದು, ಇವು ಇಲ್ಲದ ಕಾಲವನ್ನು ನೋಡುತ್ತವೆ. ಇವು ಒಂದು ಕಾಲದಲ್ಲಿದ್ದು ಮತ್ತೊಂದು ಕಾಲದಲ್ಲಿ ಇಲ್ಲದೆ ಇರುವುದರಿಂದ ಇವು ಅಂತವಂತಗಳು, ನಾಟಕ ರಂಗ ಭೂಮಿಯಲ್ಲಿ ನಾಟ್ಯ ಮಾಡುವವರು ಬಂದರೂ ಅಲ್ಲಿ ಬೆಳಗುವ ಲೈಟು

**"ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ನ ಬ್ರೂಹಾತ್ ಸತ್ಯ ಮ ಪ್ರಿಯಂ ಪ್ರಿಯಂಜ ನಾನೃತಂ ಬ್ರೂಯಾದ್ವೇಷ ಧರ್ಮೋವಿದೀಯತೇ"** – ಸತ್ಯವನ್ನೇ ಹೇಳಿರಿ, ಪ್ರಿಯವಾದುದನ್ನೇ ಹೇಳಿರಿ, ಸತ್ಯವಾಗಿದ್ದರೂ ಕೇಳಲು ಅಪ್ರಿಯವಾಗಿದ್ದರೆ ಅದನ್ನು ಹೇಳಬೇಡಿರಿ (ಶ್ರುತಿ)



ಬೆಳಗುತ್ತವೆ. ಅವರು ಬರದೇ ಹೋದರೂ ಬೆಳಗುತ್ತದೆ. ನಾಟಕ ಮುಗಿದು ಅವರೂ ಹೋದರೂ, ಆ ಜ್ಯೋತಿ ಬೆಳಗುತ್ತಲೇ ಇರುತ್ತದೆ. ಹಾಗೆ ನಾನು ಈ ಅವಸ್ಥೆಗಳಲ್ಲಿ ಒಂದೊಂದೇ ಬಂದಾಗಲೂ ಅವರನ್ನು ಬೆಳಗುತ್ತದೆ. ಅವರು ನಾಟಕ ಆಡುವುದನ್ನು ಬೆಳಗುತ್ತವೆ. ಅವರ ನಾಟಕ ಮುಗಿದ ಮೇಲೆ ಅವರು ಹೋಗಿರುವುದನ್ನು ಬೆಳಗುತ್ತವೆ. ಆದ್ದರಿಂದ ಅವು ದೃಶ್ಯ ಪೂರ್ವಗಳು. ನಾನು ಅವರನ್ನು ತೋರಿಸುವುದಷ್ಟೇ ಕೆಲಸ. ಆ ಮನಸ್ಸು ಬುದ್ಧಿ ಅಹಂಕಾರ ಚಿತ್ತಗಳ ಪರಿಚ್ಛಿನ್ನ ವಸ್ತುಗಳು, ಒಂದು ಕಾಲದಲ್ಲಿದ್ದು ಮತ್ತೊಂದು ಕಾಲದಲ್ಲಿ ಇರುವುದಿಲ್ಲ. ಆದ್ದರಿಂದ ಕಾಲಗತ ಪರಿಚ್ಛಿನ್ನ ವಸ್ತುಗಳು ಮತ್ತು ಒಂದರಂತೆ ಮತ್ತೊಂದು ಇಲ್ಲ. ಆದ್ದರಿಂದ ವಸ್ತುಗತ ಪರಿಚ್ಛಿನ್ನ ವಸ್ತುಗಳು. ಒಂದು ದೇಶದಲ್ಲಿರುತ್ತವೆ. ಮತ್ತೊಂದು ದೇಶದಲ್ಲಿರುವುದಿಲ್ಲ. ಆದ್ದರಿಂದ ಅವು ದೇಶಗತ ಪರಿಚ್ಛಿನ್ನ ವಸ್ತುಗಳು. ಆದರೆ ನಾನಾದರೋ ಅಪರಿಚ್ಛಿನ್ನನು ಮತ್ತು ಅವು ಜ್ಞಾನ ಬಂದ ಮೇಲೆ ನಾಶವಾಗುತ್ತವೆ. ನಾನಾದರೋ ಜ್ಞಾನವನ್ನು ಬೆಳಗುವವನು. ಆದ್ದರಿಂದ ಅವು ನಾನು ಅಲ್ಲ, ನನ್ನವೂ ಅಲ್ಲ, ಆದ್ದರಿಂದ ಮನೋಬುದ್ಧಿ ಚಿತ್ತ ಅಹಂಕಾರವು **"ನ ಅಹಂ"** ನಾನಲ್ಲ ಎಂದು ಹೇಳಿದ್ದಾರೆ.

**"ನ ಚ ಶ್ರೋತ್ರ ಜಿಹ್ವೆ ನಚ ಘ್ರಾಣ ನೇತ್ರೇ"** ಮಾನವನಿಗೆ ಮುಖಮಯವಾಗಿ ಬೇಕಾಗಿರುವ ಇಂದ್ರಿಯಗಳು ಇವು ಶ್ರೋತ್ರೇಂದ್ರಿಯ, ಸ್ಪರ್ಶೇಂದ್ರಿಯ, ನೇತ್ರೇಂದ್ರಿಯ, ಜಿಹ್ವೇಂದ್ರಿಯ ಮತ್ತು ಘ್ರಾಣೇಂದ್ರಿಯ. ಇವು ಜ್ಞಾನೇಂದ್ರಿಯಗಳು ಇವು ಶಬ್ದ ಸ್ಪರ್ಶ ರೂಪ, ರಸ, ಗಂಧ ಎಂಬ ಪಂಚ ವಿಷಯಗಳಲ್ಲಿ ಪ್ರವೇಶಿಸಿ ಸುಖ ದುಃಖವನ್ನು ಅನುಭವಿಸುತ್ತವೆ.

ಜಾಗ್ರದಾವಸ್ಥೆಯಲ್ಲಿರುವ ಜ್ಞಾನೇಂದ್ರಿಯಗಳೇ ಬೇರೆ ಸ್ವಪ್ನಾವಸ್ಥೆಯ ಜ್ಞಾನೇಂದ್ರಿಯಗಳೇ ಬೇರೆ, ಇವು ಅಪಂಚೀಕೃತ ಪಂಚಭೂತಗಳ ವೃಷ್ಟಿ ಸತ್ವಗುಣದಿಂದ ಹುಟ್ಟಿರುವುದರಿಂದ ಇವೆಲ್ಲಾ ಜಡ ಪದಾರ್ಥಗಳು. ಇವು ವಿದ್ಯುತ್‌ನಿಂದ ಬಲ್ಬುಗಳು ಬೆಳಗುವಂತೆ, ಫ್ಯಾನು ಗಾಳಿ ಬೀಸುವಂತೆ ನಾನು ಎಂಬ ವಿದ್ಯುತ್ ಇವುಗಳಲ್ಲಿ ಹರಿದಾಗ ಶ್ರೋತ್ರೇಂದ್ರಿಯವು ಶಬ್ದ ಕೇಳುತ್ತದೆ. ಸ್ಪರ್ಶೇಂದ್ರಿಯವು ಶೀತೋಷ್ಣಗಳನ್ನು ತಿಳಿಯುತ್ತದೆ. ನೇತ್ರೇಂದ್ರಿಯವು ರೂಪವನ್ನು ನೋಡುತ್ತದೆ. ಜಿಹ್ವೇಂದ್ರಿಯವು ರಸವನ್ನು ತಿಳಿಯುತ್ತದೆ. ಘ್ರಾಣೇಂದ್ರಿಯವು ಸುಗಂಧ ದುರ್ಗಂಧವನ್ನು ಅಳೆಯುತ್ತದೆ.

**ಉದಾ. :**

ಒಂದು ಸಾರಿ ದೇವತೆಗಳಿಗೂ ರಾಕ್ಷಸರಿಗೂ ಯುದ್ಧವಾಯಿತು. ದೇವತೆಗಳಿಗೆ ದೈವೀಬಲದಿಂದ ಜಯವಾಯಿತು. ಅದಕ್ಕಾಗಿ ಒಂದು ದೇವ ಸಭೆ ಸೇರಿತು. ಇಂದ್ರ

**"ಪ್ರಜಾಹಾತಿ ಯದಾ ಕಾಮನ್ ಸರ್ವಾನ್ ಪಾರ್ಥಮನೋಗತಾನ್"**
ಮನಸ್ಸಿನಲ್ಲಿರುವ ಎಲ್ಲಾ ಕಾಮನೆ (ಬಯಕೆ)ಗಳನ್ನು ಬಿಡಬೇಕು
(ಗೀತೆ 2–55)

ಅಧ್ಯಕ್ಷ, ಅಗ್ನಿ – ಯಮ – ವಾಯು – ಆದಿತ್ಯ ಎಲ್ಲರೂ ತಮ್ಮ ತಮ್ಮನ್ನು ನನ್ನಿಂದ ಜಯವಾಯಿತು ಎಂದು ಹೊಗಳಿಕೊಂಡರು. ಅಷ್ಟು ಹೊತ್ತಿಗೆ ಯಕ್ಷ ರೂಪಿನಿಂದ ಭಗವಂತ ದೂರದಲ್ಲಿ ನಿಂತಿದೆ. ಇಂದ್ರ, ಅಗ್ನಿಗೆ ಆ ಯಕ್ಷ ಯಾರು? ವಿಚಾರಿಸು ಎಂದ. ಅಗ್ನಿಯು ತನ್ನನ್ನು ಹೊಗಳಿಕೊಂಡವನು ಹೆದರುತ್ತಾ ಹೋದ. ಆ ಯಕ್ಷ, ನೀನು ಯಾರು? ಎಂದಿತು, ನಾನು 'ಅಗ್ನಿ' ಎಂದಿತು ಹೆದರುತ್ತಾ, ನಿನ್ನಲ್ಲಿ ಯಾವ ಶಕ್ತಿ ಇದೆ? ನಾನು ಒಂದು ಕ್ಷಣದಲ್ಲಿ ಈ ಸರ್ವ ಪ್ರಪಂಚ ಸುಡುತ್ತೇನೆ ಎಂದಿತು. ಒಂದು ಸಣ್ಣ ಹುಲ್ಲುಕಡ್ಡಿಯನ್ನು ಆ ಯಕ್ಷ, ಅಗ್ನಿಯ ಮುಂದೆ ಹಾಕಿ ಅಗ್ನಿಗೆ ಕೊಟ್ಟು ದಹನ ಶಕ್ತಿ ಹಿಂದಕ್ಕೆ ತೆಗೆದುಕೊಂಡಿತು. ಅಗ್ನಿಗೆ ಆಗಲಿಲ್ಲ. ನಾಚಿಕೆಯಿಂದ ಹಿಂದಕ್ಕೆ ಹೋಯಿತು.

ನಂತರ ವಾಯುವನ್ನು ಇಂದ್ರ ಕಳಿಸಿದ. ಆ ಯಕ್ಷ ನೀನು ಯಾರು? ನಾನು ವಾಯು. ಏನು ಶಕ್ತಿ ಇದೆ? ಈ ಸರ್ವವನ್ನು ಹಾರಿಸಬಲ್ಲೆ. ಆ ವಾಯುವಿಗೆ ಕೊಟ್ಟ ಹಾರಿಸುವ ಶಕ್ತಿ ಹಿಂದಕ್ಕೆ ಪಡೆದು ಆ ಯಕ್ಷ ಒಂದು ಹುಲ್ಲುಕಡ್ಡಿ ಹಾಕಿ, ಇದನ್ನು ಹಾರಿಸು ಎಂದ. ಆಗಲಿಲ್ಲ. ಹಿಂದಕ್ಕೆ ಹೋದ. ಹೀಗೆ ಎಲ್ಲಾ ದೇವತೆಗಳು ಹಿಂದಕ್ಕೆ ಹೋದರು.

ಸಾಕ್ಷಾತ್ ದೇವೇಂದ್ರನೇ ಬಂದು ಆ ಯಕ್ಷನಿಗೆ ನಮಸ್ಕರಿಸಿದ. ಅಹಂಕಾರ ಬುದ್ಧಿ ನಿರಶನವಾಯಿತು. ಆಗ ಇಂದ್ರ ತನ್ನನ್ನು ತಾನು ಅರ್ಪಿಸಿಕೊಂಡಿದ್ದರಿಂದ ಆ ಯಕ್ಷ **'ಉಮಾದೇವಿ'** ರೂಪ ಆಯಿತು. ಅದೇ ಬ್ರಹ್ಮ ವಿದ್ಯಾದೇವಿ. ಆಗ ಇಂದ್ರನಿಗೆ ವೇದಾಂತವನ್ನೇ ಬೋಧಿಸಿತು. ಅದೇ ಪ್ರಸಿದ್ಧ ಕೇನೋಪನಿಷತ್ತಾಯಿತು.

ಆದ್ದರಿಂದ ನಮ್ಮ ಕೈಯಿಂದ, ಕಾಲಿನಿಂದ, ಕಣ್ಣಿನಿಂದ, ಕಿವಿಯಿಂದ ಎಲ್ಲಾ ಇಂದ್ರಿಯಾದಿ ದೇಹದಿಂದ ಮಾಡುವ ಸರ್ವ ಕೆಲಸಗಳನ್ನು ಮಾಡುವವನು ಈಶ್ವರನೇ. ನೀನು ನಿಮಿತ್ತ ಮಾತ್ರ ಎಂದು ಕೇನೋಪನಿಷತ್ತು ಹೇಳುತ್ತದೆ.

ಈ ಪಂಚಜ್ಞಾನೇಂದ್ರಿಯಗಳು ಒಂದಾವಸ್ಥೆಯಲ್ಲಿರುತ್ತವೆ. ಮತ್ತೊಂದು ಅವಸ್ಥೆಯಲ್ಲಿ ಇರುವುದಿಲ್ಲ. ಆದ್ದರಿಂದ ಇವು ಅಂತವಂತಗಳು. ಇವಕ್ಕೆ ಇರುವಿಕೆ ಇಲ್ಲ. ನಾನು ಎಲ್ಲಾ ಅವಸ್ಥೆಗಳಲ್ಲಿಯೂ ಇರುತ್ತೇನೆ. ಆದ್ದರಿಂದ ನಾನು, ಸತ್ – ಪದಾರ್ಥ ಅವು ಅಸತ್ ಪದಾರ್ಥಗಳು. ಅವು ವಸ್ತುಗಳ ದೇಶಿಗತ – ಕಾಲಗತ ಪರಿಚ್ಛಿನ್ನವುಳ್ಳವುಗಳು ನಾನು ಅಪರಿಚ್ಛಿನ್ನನು. ಆದ್ದರಿಂದ ಅವು ಎಂದೂ ನಾನು ಆಗಲಾರವು – ಅವು ದೃಶ್ಯ ಜಡ – ಮಿಥ್ಯ ನಾನು ಸತ್ಯ–ನಿತ್ಯ.

**"ನ ಚ ವ್ಯೂಮ ಭೂಮಿರ್ನ ತೇಜೋ ನವಾಯು"** ಆಕಾಶ ಭೂಮಿ ತೇಜಸ್ಸು ವಾಯು – ಇನ್ನೊಂದು "ಜಲ"ವನ್ನು ನಾವೇ ಸೇರಿಸಿಕೊಳ್ಳಬೇಕು. ಇವೇ ಪಂಚಮಹಾಭೂತಗಳು ಇವು ಸೂಕ್ಷ್ಮ ದೇಹವಾಗಿರುವ ಸೂಕ್ಷ್ಮ ಪಂಚಮಹಾಭೂತಗಳೇ ಬೇರೆ. ಸ್ಥೂಲ ದೇಹವಾಗಿರುವ ಪಂಚೀಕೃತ ಪಂಚಮಹಾಭೂತಗಳೆ ಬೇರೆ. ಸೂಕ್ಷ್ಮ ಪಂಚಮಹಾಭೂತಗಳು ಒಂದರೊಳಗೊಂಡು ಸೇರಿ ಸ್ಥೂಲವಾಗಿದೆ.

---

**"ವಿಪದೋ ನೈವ ವಿಪಧಃ ಸಂಪದೋ ನಯವ ಸಂಪದಃ । ವಿಪದ್ವಿಸ್ಮರಣಂ ವಿಷ್ಣೋ ಸಂಪನ್ನಾರಾಯಣ ಸ್ಮೃತಿಃ"**–ಸಂಪತ್ತು ಸಂಪತ್ತಲ್ಲ, ಅದು ದುಃಖ ಅದು ದುಃಖವಲ್ಲ ಅದನ್ನೇ ಸಹಿಸಬೇಕು. ಹರಿಸ್ಮರಣೆಯೇ ಸಂಪತ್ತು, ಹರಿಯನ್ನು ಮರೆಯುವುದೆ ದುಃಖ



ಇದು ಮೊದಲು ಅಪಂಚೀಕೃತವಾದ ಪಂಚಮಹಾಭೂತಗಳು ಈಗ ಎಲ್ಲರದ್ದು ಸೇರಿ ಪಂಚೀಕೃತ ಪಂಚಮಹಾಭೂತಗಳಾದವು. ಅಪಂಚೀಕೃತ ಪಂಚಭೂತಗಳ ಸಮಷ್ಠೀ ಸತ್ವಗುಣದಿಂದ ಮನಸ್ಸು – ಬುದ್ಧಿ – ಚಿತ್ತ – ಅಹಂಕಾರವಾದವು. ಇದೇ ಅಂತಃಕರಣ – ಇದು ಒಳಗಿನ ಆತ್ಮವನ್ನು ತಿಳಿಯುವ ಶಕ್ತಿ ಪಡೆದಿರುತ್ತದೆ. ಹೊರಗಿನ ಸರ್ವ ಪ್ರಪಂಚವನ್ನು ತಿಳಿಯುವ ಶಕ್ತಿ ಪಡೆದಿರುತ್ತದೆ.

ಈ ಪಂಚಭೂತಗಳು ಜಡವಾಗಿರುವುದರಿಂದಲೂ ದೃಶ್ಯವಾಗಿರುವುದರಿಂದ ನಾನು ಆಗಲಾರೆ. ನಾನು ದೃಕ್ ನೋಡುವವನು ಅದು ಕಾಣುವುದು. ಇದು ಜಡವಾಗಿರುವುದರಿಂದ ಮಿಥ್ಯವಾದದ್ದು ಇದೂ ನಾನು ಆಗಲಾರೆನು.

ಹಾಗಾದರೆ ನಾನು ಯಾರು? ಅಂತಃಕರಣವು ನಾನು ಅಲ್ಲ. ನನ್ನದೂ ಅಲ್ಲ. ಇನ್ನೂ ಜ್ಞಾನೇಂದ್ರಿಯಗಳು ನಾನು ಅಲ್ಲ, ನನ್ನದೂ ಅಲ್ಲ – ಅವು ದೃಶ್ಯ ಜಡ ನಾನು ಚೈತನ್ಯನು ಆದ್ದರಿಂದ ನಾನು – **"ಚಿದಾನಂದ ರೂಪ"** ನಾನು ಶಿವನೇ ಆಗಿದ್ದೇನೆ. **"ಇದೇ ನಿರ್ವಾಣ – ಇದೇ ಮೋಕ್ಷ. ಇದೇ ಸ್ವರೂಪ ಸ್ಥಿತಿ, ಇದೇ ಪರಮ ಪದವಿ."**

ಇನ್ನುಳಿದ 7ನೇ ಶ್ಲೋಕದಲ್ಲಿ ಪಂಚ ಪ್ರಾಣವಾಯುಗಳು ಪ್ರಾಣ ಅಪಾನ–ಸಮಾನ – ಉದಾನ – ವ್ಯಾನ – ಇವು ನಾನಲ್ಲ ಪಂಚಕೋಶಗಳಾದ ಅನ್ನಮಯ –ಪ್ರಾಣಮಯ – ಮನೋಮಯ – ವಿಜ್ಞಾನಮಯ – ಆನಂದಮಯ ಕೋಶಗಳು ನಾನಲ್ಲ. ಇನ್ನು ಪಂಚಕರ್ಮೇಂಂದ್ರಿಯಗಳಾದ ವಾಕ್–ಪಾಣಿ–ಪಾದ– ಉಪಸ್ಥ–ಪಾಯು ನಾನಲ್ಲ ಜ್ಞಾನೇಂದ್ರಿಯಗಳು ನಾನಲ್ಲ. ನಾನ ಶಿವಸ್ವರೂಪನೇ ಅಗಿದ್ದೇನೆ.

ಆದ್ದರಿಂದ ಎಲ್ಲ ಶ್ಲೋಕದಲ್ಲಿ ವೇದಾಂತವನ್ನೇ ತುಂಬಿ ನಾನು ಚಿದಾನಂದ ರೂಪನೇ – ನಾನು ಸಾಕ್ಷಾತ್ ಶಿವನೇ ಆಗಿದ್ದೇನೆ ಎಂದೂ ಈ ಆರೂ ಶ್ಲೋಕಗಳನ್ನು ಶ್ರೀಶಂಕರ ಭಗವತ್ ಪಾದರು ರಚಿಸಿ ನಮಗೆ ಕೊಟ್ಟು ಹೋಗಿದ್ದಾರೆ. ಇಂತಹ ನಿರ್ವಾಣ ಪಟ್ಕವನ್ನು ದಿನಕ್ಕೆ ಒಂದು ಸಾರಿಯಾದರೂ ಓದಿ ಅರ್ಥ ತಿಳಿದು ಅನುಷ್ಠಾನ ಮಾಡಿದರೆ ಶಿವಸ್ವರೂಪರೇ ಆಗುತ್ತಾರೆಂದು ನಾನು ಸಾಕ್ಷಾತ್ ಶಿವನೇ ಆಗುತ್ತೇನೆಂದು ಆಚಾರ್ಯರು ಈ ನಿರ್ವಾಣ ಶಟ್ಕದಲ್ಲಿ ತಿಳಿಸಿದ್ದಾರೆ. ತಾವೆಲ್ಲರೂ ಧನ್ಯರಾಗಿರಿ, ಆತ್ಮಸ್ವರೂಪರಾಗಿರಿ, ನಿಮ್ಮನ್ನು ನೀವು ಉದ್ಧಾರ ಮಾಡಿಕೊಳ್ಳಿರಿ.

**ಓಂ ಸಚ್ಚಿದಾನಂದಾಯ ವಿದ್ಮಹೇ ।**

**ಪರಬ್ರಹ್ಮಣೇ ಧೀಮಹೀ ತನ್ನೋ ಶಂಕರ ಪ್ರಚೋದಯಾಥ್**

**ಓಂ ಶಾಂತಿಃ ಶಾಂತಿಃ ಶಾಂತಿಃ**

**ಓಂ ತತ್ಸತ್**

---

**"ಧರ್ಮಂ ಕ್ಷಕತಿ ಕೀರ್ತನಾತ್"**

ತನ್ನನ್ನು ತಾನು ಹೊಗಳಿಕೊಳ್ಳುವುದರಿಂದ ತಾನು ಗಳಿಸಿದ ಉತ್ತಮ ಧರ್ಮವು ನಾಶವಾಗುತ್ತದೆ (ಮನು ಧರ್ಮ)